

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಕೃಷಿ ಮಹಾವಿದ್ಯಾಲಯ, ರಾಯಚೂರು

ಕನ್ನಡ ಸಂಘ





# ನೇಗಿಲ  ಸಿರಿ

ಬೆಳೆಸೋಣ ಕನ್ನಡವ ಎಡೆದೊರೆ ನಾಡಿನಲ್ಲಿ


ಅರ್ಧವಾರ್ಷಿಕ ನಿಯತಕಾಲಿಕೆ


ಪ್ರಥಮ ಸಂಚಿಕೆ

ಏಪ್ರಿಲ್ ೨೦೨೪




ನಮ್ಮ ನಾಡು
ಕನ್ನಡ
ಕರ್ನಾಟಕ
ಕನ್ನಡನಾಡು


ಜ್ಞಾನಪೀಠ ಪ್ರಶಸ್ತಿ
ಪುರಸ್ಕೃತ ಕನ್ನಡಿಗರು
ಕುವೆಂಪು
ದ. ರಾ. ಬೇಂದ್ರೆ
ಶಿವರಾಮ ಕಾರಂತ
ಮಾಸ್ತಿ ವೆಂಕಟೇಶ ಅಯ್ಯಂಗಾರ್
ವಿ. ಕೃ. ಗೋಕಾಕ
ಯು. ಆರ್. ಅನಂತಮೂರ್ತಿ
ಗಿರೀಶ್ ಕಾರ್ನಾಡ್
ವರ್ಷ : 1998
ಚಂದ್ರಶೇಖರ ಕಂಬಾರ
ವರ್ಷ : 2010


ಕರ್ನಾಟಕ ಸಾಮ್ರಾಜ್ಯದ ಲಾಂಛನಗಳು

# ಕೃಷಿ ಮಹಾವಿದ್ಯಾಲಯ, ರಾಯಚೂರು

## ಸಂಪಾದಕರ ಮಂಡಳಿ:

**ಅಧ್ಯಕ್ಷರು :** **ಡಾ. ನಾರಾಯಣರಾವ್ ಕೆ.**
ಡೀನ್ (ಕೃಷಿ)
ಕೃ.ಮ.ವಿ. ರಾಯಚೂರು

**ಪ್ರಧಾನ ಸಂಪಾದಕರು :** **ಡಾ. ಎ.ಜಿ. ಶ್ರೀನಿವಾಸ್**
ಮುಖ್ಯ ಸಿಬ್ಬಂದಿ ಸಲಹೆಗಾರರು
ಕೃ.ಮ.ವಿ. ರಾಯಚೂರು

**ಸಂಪಾದಕರು :** **ಡಾ. ವಿಶ್ವನಾಥ್.ಎಸ್**
ಕನ್ನಡ ಸಂಘದ ಸಲಹೆಗಾರರು
ಕೃ.ಮ.ವಿ. ರಾಯಚೂರು

**ಸಹಸಂಪಾದಕರು :** **ಶ್ರೀಮತಿ ನಾಗರತ್ನ**
ಶಿಕ್ಷಕರು ಕನ್ನಡ ವಿಭಾಗ
ಕೃ.ಮ.ವಿ. ರಾಯಚೂರು

**ಸಹಾಯಕ ಸಂಪಾದಕರು :** **ಪ್ರಜ್ವಲ್. ಮಾದನಶೆಟ್ಟಿ**
ಕನ್ನಡ ಸಂಘದ ಕಾರ್ಯದರ್ಶಿಗಳು (ಸ್ನಾತಕ)

**ಸಂಜಯ ಗೌಡ**
ಕನ್ನಡ ಸಂಘದ ಕಾರ್ಯದರ್ಶಿಗಳು (ಸ್ನಾತಕೋತ್ತರ)

# ಸಂಪಾದಕ ಮಂಡಳಿ ಸದಸ್ಯರು:

**ಸದಾನಂದ ಪೂಜಾರಿ**

ಅಂತಿಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿ

**ಜಿ.ಬಸವರಾಜ್**

ಅಂತಿಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿ

**ಆಕಾಶ್‌ರೆಡ್ಡಿ**

ಅಂತಿಮ ವರ್ಷದ ಕೃಷಿ ವಿದ್ಯಾರ್ಥಿ

**ಸ್ವಾತಿ ಟೆಂಗೂರಿ**

ಅಂತಿಮ ವರ್ಷದ ಕೃಷಿ ವಿದ್ಯಾರ್ಥಿನಿ

**ಆರ್.ಮಣಿಕಂಠ ರೆಡ್ಡಿ**

ಅಂತಿಮ ವರ್ಷದ ಕೃಷಿ ವಿದ್ಯಾರ್ಥಿ

**ಬಸವರಾಜ್**

ತೃತೀಯ ವರ್ಷದ ಕೃಷಿ ವಿದ್ಯಾರ್ಥಿ

**ಹನುಮೇಶ**

ತೃತೀಯ ವರ್ಷದ ಕೃಷಿ ವಿದ್ಯಾರ್ಥಿ

**ಭಾಗ್ಯಶ್ರೀ ಕೆ.ಕೆ**

ತೃತೀಯ ವರ್ಷದ ಕೃಷಿ ವಿದ್ಯಾರ್ಥಿನಿ

**ಲಕ್ಷ್ಮೀ ಪೂಜಾರಿ**

ತೃತೀಯ ವರ್ಷದ ಕೃಷಿ ವಿದ್ಯಾರ್ಥಿನಿ

**ಹನುಮೇಶ**

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿ

**ರಘುನಾಥ್.ಪವಾರ್**

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿ

**ದಿವ್ಯರಾಣಿ**

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿನಿ

**ಶಿವಾಲತಾ**

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿನಿ

**ಕಾವ್ಯ. ಎನ್.ಎಚ್**

ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿನಿ

**ದೇವಿಚಂದ್.ಕೆ**

ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿ

**ಭರತ್**

ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿ

**ತನುಜಾ**

ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿನಿ

# ಸಲಹಾ ಸಮಿತಿ

## ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

**ಡಾ. ಎಂ.ಹನುಮಂತಪ್ಪ** , ಶಿಕ್ಷಣ ನಿರ್ದೇಶಕರು , ಕೃ.ವಿ.ವಿ. ರಾಯಚೂರು

**ಡಾ. ಅಮರೇಗೌಡ.** ಎ, ಸಂಶೋಧನಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು

**ಡಾ. ಎನ್. ಶಿವಶಂಕರ್**, ಕೃಷಿ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು

**ಡಾ. ಗುರುರಾಜ್. ಸುಂಕದ್**, ಕುಲಸಚಿವರು, ಕೃ.ವಿ.ವಿ. ರಾಯಚೂರು

**ಡಾ. ಜಾಗೃತಿ.ಬಿ. ದೇಶಮಾನ್ಯ**, ಡೀನ್(ಸ್ನಾತಕೋತ್ತರ), ಕೃ.ವಿ.ವಿ. ರಾಯಚೂರು

**ಡಾ. ಎಂ. ಎಸ್. ಅಯ್ಯನಗೌಡರ್**, ಡೀನ್ (ಕೃಷಿ ತಾಂತ್ರಿಕ) ಕೃ. ತಾಂ.ಮ.ವಿ. ರಾಯಚೂರು

**ಡಾ. ಯು. ಸತೀಶ್ ಕುಮಾರ್ ಎಂ**, ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ) ಮತ್ತು ಸಂಪಾದಕರು, ಪ್ರಕಟಣಾ ಕೇಂದ್ರ, ಕೃ.ವಿ.ವಿ. ರಾಯಚೂರು

**ಡಾ. ವಿಜಯಶಂಕರ್**, ಹಣಕಾಸು ನಿಯಂತ್ರಣ ಅಧಿಕಾರಿಗಳು, ಕೃ.ವಿ.ವಿ. ರಾಯಚೂರು

**ಡಾ. ಮಚೇಂದ್ರಿನಾಥ.ಎಸ್**, ಗ್ರಂಥಾಲಯ ಪಾಲಕರು, ಕೃ.ವಿ.ವಿ. ರಾಯಚೂರು

**ಶ್ರೀ ರವಿ.ಮೇಸ್ತ**, ಆಸ್ತಿ ಅಧಿಕಾರಿಗಳು, ಕೃ.ವಿ.ವಿ. ರಾಯಚೂರು

**ಡಾ. ಆರ್.ವಿ. ಬೆಳಧಡಿ**, ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮ ಸಂಯೋಜಕರು, ಕೃ.ವಿ.ವಿ. ರಾಯಚೂರು

# ಸಲಹಾ ಸಮಿತಿ

## ಕೃಷಿ ಮಹಾವಿದ್ಯಾಲಯ, ರಾಯಚೂರು

**ಡಾ. ರಾಜಣ್ಣ.ಎಸ್.** ಉಪನಿರ್ದೇಶಕರು, (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ)
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು
ದೈಹಿಕ ಶಿಕ್ಷಣ ವಿಭಾಗ, ಕೃ.ಮ.ವಿ. ರಾಯಚೂರು

**ಡಾ. ಲೋಕೇಶ್.ಜಿ. ಬಿ** ಸಾಹಿತ್ಯ ಸಲಹೆಗಾರರು, ಕೃ.ಮ.ವಿ. ರಾಯಚೂರು

**ಡಾ. ಶೇಖರಗೌಡ ಪಾಟೀಲ್** ಸಾಂಸ್ಕೃತಿಕ ಸಲಹೆಗಾರರು, ಕೃ.ಮ.ವಿ. ರಾಯಚೂರು

**ಡಾ. ಸತೀಶ್ ಕುಮಾರ್ ಎಂ** ಕ್ರೀಡಾ ಸಲಹೆಗಾರರು, ಕೃ.ಮ.ವಿ. ರಾಯಚೂರು

**ಡಾ. ಸುವರ್ಣ** ಕಾರ್ಯಕ್ರಮ ಅಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಕೃ.ಮ.ವಿ. ರಾಯಚೂರು

**ಡಾ. ಸಂಗಣ್ಣ. ಸಜ್ಜನವರ್** ಕಾರ್ಯಕ್ರಮ ಅಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಕೃ.ಮ.ವಿ. ರಾಯಚೂರು

**ಡಾ. ವಿಜಯಕುಮಾರ್.ಕುರ್ನಾಲಿಕರ್** ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ ಅಧಿಕಾರಿಗಳು, ಕೃ.ಮ.ವಿ. ರಾಯಚೂರು

**ಡಾ. ಹರೀಶ್ ಬಾಬು** ಯೂಥ್ ರೆಡ್ ಕ್ರಾಸ್ ಅಧಿಕಾರಿಗಳು, ಕೃ.ಮ.ವಿ. ರಾಯಚೂರು

# ಒಳನೋಟ

## ಮುನ್ನುಡಿ

## ಕವನಗಳು


| ಕ್ರಮ ಸಂಖ್ಯೆ | ಶೀರ್ಷಿಕೆ | ಲೇಖಕರು | ಪುಟ ಸಂಖ್ಯೆ |
|---|---|---|---|
| 01 | ನೇಗಿಲ ಸಿರಿ | ಡಾ. ವಿಶ್ವನಾಥ. ಎಸ್. | 18 |
| 02 | ಕೃಷಿ ಮಹಾವಿದ್ಯಾಲಯ ರಾಯಚೂರು | ಸ್ವಾತಿ ಟೆಂಗೂರಿ | 18 |
| 03 | ಮಾಡಿರುವೆ ಪ್ರೀತಿ | ವಾಗೇಶ.ಎಮ್.ಪಾಟೀಲ್ | 19 |
| 04 | ಕವಿ | ಸ್ವಾತಿ ಟೆಂಗೂರಿ | 19 |


## ಕವಿತೆಗಳು


| | | | |
|---|---|---|---|
| 01 | ಕನ್ನಡ | ಜಿ.ಬಸವರಾಜ್ | 21 |
| 02 | ಪುಣ್ಯ ಭೂಮಿ ಭಾರತ | ಶ್ರೀಮತಿ ನಾಗರತ್ನ | 22 |
| 03 | ನಾ ಕಂಡ ಯೋಧ' | ಸ್ವಾತಿ ಟೆಂಗೂರಿ | 22 |
| 04 | ಅನ್ನದಾತ | ಭೂಮಿಕಾ | 23 |

| | | | |
|---|---|---|---|
| 05 | ಕರುಣಿಸು ಭೂತಾಯಿ | ರಘುನಾಥ್. ಪವಾರ್ | 23 |
| 06 | ಚೈತ್ರದ ಚಿಗುರು | ತನುಜಾ | 24 |
| 07 | ಯುಗಾದಿ | ನಂದಿನಿ | 25 |
| 08 | ಯುಗಾದಿ ಪರ್ವ | ಭಾಗ್ಯಶ್ರೀ ಕೆ.ಕೆ | 25 |
| 09 | ಸಂಕ್ರಾಂತಿ | ಲಕ್ಷ್ಮೀ ಪೂಜಾರಿ | 26 |
| 10 | ಸಂಕ್ರಾಂತಿ ಹಬ್ಬ | ಸುನೀಲ್ ಅಶೋಕ್ ಗಾಣಿಗೇರ | 26 |
| 11 | ಆಕಾರ | ಡಾ. ವಿಶ್ವನಾಥ. ಎಸ್ | 27 |
| 12 | ನೈತಿಕ ಮೌಲ್ಯ ಇಲ್ಲದಿದ್ದರೆ! | ರೋಹನ್ | 27 |
| 13 | ಯವ್ವಾ ಬೇ ನೀ ಯಾಕ್ಹಿಂಗ...? | ಲಕ್ಷ್ಮೀ ಪೂಜಾರಿ | 28 |
| 14 | ಕುರುಕ್ಷೇತ್ರ | ಜಯಂತ್.ಕುಲಕರ್ಣಿ | 29 |


## ಲೇಖನಗಳು


| | | | |
|---|---|---|---|
| 01 | ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ | ಶ್ರೀ ರವಿ ಏಮ್. ಸಾಂಬ್ರಾಣಿ | 31 |

| | | | |
|---|---|---|---|
| 02 | ಅಮ್ಮ ಕಲಿಸಿದ ಪಾಠ | ಡಾ. ಸುಮಾ. ಟಿ.ಸಿ. | 32 |
| 03 | ಯುವಕರು ಮತ್ತು ಕೃತಕ ಬುದ್ಧಿಮತ್ತೆ ಭವಿಷ್ಯದ ಜಾಣಮತಿ! | ಶ್ರೀಮತಿ ಮಲ್ಲಿಕಾ ಮೇಟಿ | 33 |
| 04 | ಸ್ವಾಮಿ ವಿವೇಕಾನಂದರ ಕುರಿತು ಪ್ರಬಂಧ | ಕಾವ್ಯ. ಎನ್.ಎಚ್ | 37 |
| 05 | ಭಾರತ ಬೆಳೆಯುತ್ತಿಲ್ಲ ಬಳಲುತ್ತಿದೆ | ಜಿ.ಬಸವರಾಜ್ | 38 |


## ಚಿತ್ರಕಲೆ


| | | | |
|---|---|---|---|
| 01 | ವಿಶ್ವ ಮಾನವ (ಕುವೆಂಪು)<br>ನಾಕುತಂತಿಯ ಸರದಾರ (ದ.ರಾ ಬೇಂದ್ರೆ) | ಚೆನ್ನವೀರೇಶ ಜೆ. ವಿ | 41 |
| 02 | ಕರುನಾಡ ವೈಭವ<br>ಕರ್ನಾಟಕ ರತ್ನ ಅಜರಾಮರ ಪುನೀತ | ರೋಷಿಣಿಪ್ರಿಯ. ಸಿ. ಎಚ್ | 41 |
| 03 | ಗಾನ ಗಂಧರ್ವ<br>ನಾಟ್ಯ ಮಯೂರಿ<br>ಶಬ್ಧಗಾರುಡಿಗ | ರಕ್ಷಿತ್. ಬೇವಿನಮರದ | 42 |
| 04 | ಯಕ್ಷಗಾನ | ದಿವ್ಯ .ಕೆ.ಟಿ. | 42 |
| 05 | ನಮ್ಮ ನಾಡಿನ ಹೆಮ್ಮೆಯ ಕೋಲ | ಎ. ಕೆ. ಯಶಸ್ವಿನಿ | 43 |

# ಪ್ರಧಾನ ಸಂಪಾದಕರು

## ಉಸಿರಾಗಲಿ ಕೃಷಿ, ಹೆಸರಾಗಲಿ ' ನೇಗಿಲ ಸಿರಿ'



ಅರ್ಧವಾರ್ಷಿಕ ನಿಯತಕಾಲಿಕೆಯಾದ **ನೇಗಿಲ ಸಿರಿ** ಯು ತನ್ನಲ್ಲಿ ಅತ್ಯದ್ಭುತ ಪ್ರತಿಭೆಗಳನ್ನು ಅತ್ಯುತ್ತಮ ಕವನ,ಕವಿತೆ,ಲೇಖನಗಳನ್ನು ಒಳಗೊಂಡಿದೆ. ಕೃಷಿ ಮಹಾವಿದ್ಯಾಲಯ, ರಾಯಚೂರಿಗೆ ಕನ್ನಡ ಸಂಘದ ವತಿಯಿಂದ ಹೊಸ ಪ್ರಯತ್ನವಾಗಿದೆ. ಕೃಷಿ ಮಹಾವಿದ್ಯಾಲಯದಲ್ಲಿ ಇರುವ ಕನ್ನಡ ಸಾಹಿತ್ಯ ಅಭಿಮಾನಿಗಳಿಗೆ ಇದೊಂದು ಅತ್ಯುತ್ತಮ ವೇದಿಕೆಯಾಗಿದೆ.

ಮೊಬೈಲ್, ಲ್ಯಾಪ್ ಟಾಪ್ ಯುಗದಲ್ಲಿ ಈ ನೇಗಿಲ ಸಿರಿ ಯು ನಮ್ಮಲ್ಲಿರುವ ಬರವಣಿಗೆಯ ಮತ್ತು ಓದುವ ಹವ್ಯಾಸವನ್ನು ವೃದ್ಧಿಪಡಿಸುತ್ತದೆ. ನೇಗಿಲ ಸಿರಿಯಿಂದ ನಮ್ಮ ಮೆದುಳು ಚಟುವಟಿಕೆಯಿಂದಿರುವಂತೆ ಮಾಡುತ್ತದೆ ಮತ್ತು ವಿದ್ಯಾರ್ಥಿ, ಶಿಕ್ಷಕ, ಶಿಕ್ಷಕೇತರರ ಪ್ರತಿಭೆಯನ್ನು ಹೊರಸೂಸಲು ಉಪಕಾರಿಯಾಗಿದೆ. ನೇಗಿಲ ಸಿರಿಯು ವಿದ್ಯಾರ್ಥಿ, ಶಿಕ್ಷಕ, ಶಿಕ್ಷಕೇತರರ ಪ್ರತಿಭೆಯನ್ನು ಹೊಂದಿರುವ ಸಂಪತ್ತಾಗಿದೆ. ನಮ್ಮ ನೇಗಿಲ ಸಿರಿ ಬಹು ದೊಡ್ಡ ಹೆಸರು ಮಾಡಲಿ, ವಿದ್ಯಾರ್ಥಿಗಳ ಜೀವನಕ್ಕೆ ಮತ್ತು ಅವರ ಪ್ರತಿಭೆಗೆ ದಾರಿದೀಪವಾಗಲಿ ಎಂದು ಬಯಸುತ್ತೇನೆ. ಉಸಿರಾಗಲಿ ಕೃಷಿ, ಹೆಸರಾಗಲಿ ನೇಗಿಲ ಸಿರಿ.

**ಡಾ. ಎ. ಜಿ. ಶ್ರೀನಿವಾಸ್**
**ಮುಖ್ಯ ಸಿಬ್ಬಂದಿ ಸಲಹೆಗಾರರು**
**ಮುಖ್ಯಸ್ಥರು & ಪ್ರಾಧ್ಯಾಪಕರು**
**ಕೀಟ ಶಾಸ್ತ್ರ ವಿಭಾಗ**
**ಕೃ.ಮ.ವಿ., ರಾಯಚೂರು**

# ಸಂಪಾದಕರ ನುಡಿ



**ನೇಗಿಲ ಸಿರಿ** ನಿಯತಕಾಲಿಕೆಯು ಅಸ್ತಿತ್ವಕ್ಕೆ ಬರಲು ಮುಖ್ಯ ಕಾರಣ ವಿದ್ಯಾರ್ಥಿಗಳಲ್ಲಿರುವ ಕನ್ನಡಪ್ರೇಮ ಮತ್ತು ಕನ್ನಡಭಾಷೆಯ ಲಿಪಿಯ ಬಗ್ಗೆ ಇರುವ ಉತ್ಸಾಹ. ಈ ನಿಯತಕಾಲಿಕೆಯು ಕೃಷಿ ವಿದ್ಯಾರ್ಥಿಗಳ ಮತ್ತು ಕನ್ನಡ ಭಾಷೆಯ ಸಂಬಂಧವನ್ನು ಗಟ್ಟಿಗೊಳಿಸುವಲ್ಲಿ ಕಾರ್ಯನಿರ್ವಹಿಸುತ್ತದೆ. ಕೃಷಿ ವಿದ್ಯಾರ್ಥಿಗಳ ಬೋಧನಾ ಮಾಧ್ಯಮ ಆಂಗ್ಲ ಭಾಷೆಯಾಗಿದೆ. ಆದರೆ ರೈತರ ಹತ್ತಿರ ಕನ್ನಡ ಭಾಷೆಯಲ್ಲಿ ಸಂವಹನ ಮಾಡುವಾಗ ಕೆಲ ವಿದ್ಯಾರ್ಥಿಗಳು ಕಷ್ಟ ಪಡುತ್ತಾರೆ, ಇದಕ್ಕೆ ಹಲವು ಕಾರಣಗಳಿರಬಹುದು. ಆದರೆ, ಈ ನಿಯತಕಾಲಿಕೆಯು ಅಂತಹ ಹಲವು ವಿದ್ಯಾರ್ಥಿಗಳಿಗೆ ದಾರಿದೀಪವಾಗಲಿದೆ. ಹೊರ ರಾಜ್ಯದಿಂದ ಬಂದಿರುವ ವಿದ್ಯಾರ್ಥಿಗಳಿಗೆ ಕನ್ನಡ ಕಲಿಯಲು ಈ ನಿಯತಕಾಲಿಕೆಯು ಪ್ರೇರೇಪಿಸುತ್ತದೆ, ಇನ್ನೂ ಕನ್ನಡಭಾಷೆಯ ಲಿಪಿಯ ಬಗ್ಗೆ ಪ್ರತಿಭೆ ಹೊಂದಿರುವ ವಿದ್ಯಾರ್ಥಿಗಳಿಗೆ ಅವರ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಅವಕಾಶವಾಗಿದೆ. ಕನ್ನಡಭಾಷೆ ನಮ್ಮ ಮಾತೃಭಾಷೆ ಅಥವಾ ನಾಡ ಭಾಷೆಯಾಗಿದ್ದರೂ ಸಹ ಹಲವು ಶಬ್ಧಗಳು, ಶಬ್ಧಗಳ ಅರ್ಥ ನಮಗೆ ಸರಿಯಾಗಿ ತಿಳಿದಿರುವುದಿಲ್ಲ. ಈ ನಿಯತಕಾಲಿಕೆಯ ಮೂಲಕ ಹೆಚ್ಚೆಚ್ಚು ತಿಳಿದುಕೊಳ್ಳಬಹುದಾಗಿದೆ.

ಈ ನಿಯತಕಾಲಿಕೆಗೆ ನೇಗಿಲ ಸಿರಿ ಎಂದು ನಾಮಾಂಕಿತವಾಗಿದೆ. ಸಾಕಷ್ಟು ಜನರಲ್ಲಿ 'ನೇಗಿಲ ಸಿರಿ' ಎಂಬ ಹೆಸರೇಕೆ? ಎನ್ನುವ ಸಂಶಯ ಮೂಡಿರಬಹುದು, ಅಥವಾ ಕೆಲವರಿಗೆ ಈ ಹೆಸರಿನ ಅರ್ಥ ತಿಳಿದಿರಬಹುದು, ಆದರೂ ಇನ್ನೊಮ್ಮೆ ಅರ್ಥೈಸಲು ಬಯಸುತ್ತೇನೆ. ' ನೇಗಿಲು' ಎಂದರೆ ಕೃಷಿಯ ಸಂಕೇತ ಅಥವಾ ಕೃಷಿಯಲ್ಲಿ ಬಳಸುವ ಉಪಕರಣ ಮತ್ತು ' ಸಿರಿ' ಎಂದರೆ ಸಂಪತ್ತು ಅಥವಾ ಲಕ್ಷ್ಮಿ. ನಮ್ಮದು ಕೃಷಿ ಮಹಾವಿದ್ಯಾಲಯವಾಗಿರುವುದರಿಂದ ನಮಗೆ ನೇಗಿಲೇ ಸಂಪತ್ತಿನಂತೆ ಮತ್ತು ನೇಗಿಲಿನಲ್ಲಿಯೇ ದೇವಿ ಲಕ್ಷ್ಮಿಯನ್ನು ಕಾಣುತ್ತೇವೆ.

ಈ ನಮ್ಮ **ನೇಗಿಲ ಸಿರಿ** ಯು ವಿದ್ಯಾರ್ಥಿ ಗಳ ಪ್ರತಿಭೆಯ ಸಂಪತ್ತಾಗಲಿ ಎನ್ನುವುದೇ ನನ್ನ ಆಶಯ. ಈ ನಿಯತಕಾಲಿಕೆಯಲ್ಲಿ ಒಟ್ಟು 4 ಭಾಗಗಳಿವೆ ಯಾವುವೆಂದರೆ ಕವನ, ಕವಿತೆ, ಲೇಖನ

ಮತ್ತು ಚಿತ್ರಕಲೆ. ಕವನದಲ್ಲಿ ಮುಕ್ತಕ, ತ್ರಿಪದಿ, ಚೌಪದಿ, ಎಪಿಗ್ರಾಮ್, ಹೈಕು, ರುಬಾಯಿ, ಲಿಮರಿಕ್, ಶಾಯರಿ ಮುಂತಾದ ಹನಿಗವನಗಳನ್ನು ಒಳಗೊಂಡಿದೆ. ಕವಿತೆಗಳು ಹೆಚ್ಚೆಚ್ಚು ಸಾಲುಗಳಿಂದ ಕೂಡಿರುತ್ತವೆ ಹಾಗೂ ಸಾಮಾಜಿಕ, ಕೃಷಿ ಸಂಬಂಧಿತ ಸಂದೇಶಗಳನ್ನು ಒಳಗೊಂಡಿರುತ್ತವೆ. ಇನ್ನೂ, ಲೇಖನಗಳಲ್ಲಿ ಸಣ್ಣಕಥೆ, ಸಾಮಾಜಿಕ ಕಳಕಳಿವುಳ್ಳ ಮತ್ತು ಕೃಷಿ ಸಂಬಂಧಿತ ಲೇಖನಗಳನ್ನೂ ಓದಬಹುದಾಗಿದೆ. ನೇಗಿಲ ಸಿರಿ ನಿಯತಕಾಲಿಕೆಯು ಬರೀ ವಿದ್ಯಾರ್ಥಿ ಗಳಿಗಲ್ಲದೆ, ಕೃಷಿ ಮಹಾವಿದ್ಯಾಲಯ, ರಾಯಚೂರಿನ ಶಿಕ್ಷಕ, ಶಿಕ್ಷಕೇತರರಿಗೂ ಸಹ ಕವನ, ಕವಿತೆ ಮತ್ತು ಲೇಖನಗಳನ್ನು ಬರೆಯಲು ಮುಕ್ತ ಅವಕಾಶವನ್ನು ಹೊಂದಿದೆ.

ನಮ್ಮ **ನೇಗಿಲ ಸಿರಿ** ನಿಯತಕಾಲಿಕೆ ಅಸ್ತಿತ್ವಕ್ಕೆ ಬರಲು ಬಹಳಷ್ಟು ಜನರ ಸಹಕಾರ ಮತ್ತು ಶ್ರಮವಿದೆ. ಅವರಲ್ಲಿ ಪ್ರಮುಖರಾದ ಗೌರವಾನ್ವಿತ ಕುಲಪತಿಗಳು ಮತ್ತು ಶಿಕ್ಷಣ ನಿರ್ದೇಶಕರಾದ ಡಾ.ಎಂ.ಹನುಮಂತಪ್ಪ (ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು), ವಿದ್ಯಾರ್ಥಿ ಕ್ಷೇಮಾಭಿವೃದ್ಧಿಯ ಮುಖ್ಯಸ್ಥರಾದ ಡಾ. ಯು ಸತೀಶ್ ಕುಮಾರ್. (ಕೃಷಿ ವಿಜ್ಞಾನಗಳ ಕೃಷಿ ಮಹಾವಿದ್ಯಾಲಯ, ರಾಯಚೂರು), ಮುಖ್ಯಸ್ಥರಾದ ಡಾ. ನಾರಾಯಣರಾವ್. ಕೆ., (ಕೃಷಿ ಮಹಾವಿದ್ಯಾಲಯ, ರಾಯಚೂರು), ಮುಖ್ಯ ಸಿಬ್ಬಂದಿ ಸಲಹೆಗಾರರಾದ ಡಾ. ಎ.ಜಿ. ಶ್ರೀನಿವಾಸ್ (ಕೃಷಿ ಮಹಾವಿದ್ಯಾಲಯ ರಾಯಚೂರು) ಮತ್ತು ಕನ್ನಡ ಸಂಘದ ಸಲಹೆಗಾರರು, ಪದಾಧಿಕಾರಿಗಳು, ಕೃಷಿ ಮಹಾವಿದ್ಯಾಲಯ ಶಿಕ್ಷಕ, ಶಿಕ್ಷಕೇತರರು, ನಮ್ಮ ಎಲ್ಲಾ ವಿದ್ಯಾರ್ಥಿಗಳಿಗೆ ನನ್ನ ಅನಂತ–ಅನಂತ ಧನ್ಯವಾದಗಳು.

**ಡಾ. ವಿಶ್ವನಾಥ.ಎಸ್**
**ಕನ್ನಡ ಸಂಘದ ಸಲಹೆಗಾರರು**
**ಸಹಾಯಕ ಪ್ರಾಧ್ಯಾಪಕರು**
**ಬೇಸಾಯ ಶಾಸ್ತ್ರ ವಿಭಾಗ**
**ಕೃ.ಮ.ವಿ. ರಾಯಚೂರು**

## ಜ್ಞಾನ, ಕನಸು ಮತ್ತು ಭಾವನೆಗಳ ಹೊತ್ತ ಸವಾರಿ'



**ನೇಗಿಲ ಸಿರಿ** ಯು ಜ್ಞಾನ, ಸೃಜನಶೀಲತೆ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ಮೆಚ್ಚುಗೆಯೆಡೆಗೆ ವಿದ್ಯಾರ್ಥಿಗಳಿಗಾಗಿಯೇ ಸಮರ್ಪಿತವಾದ ಒಂದು ಕಿರು ಪೌರ್ಣಿಮೆ. ಈ ಪುಟಗಳ ನಡುವಣ ಪ್ರತಿಯೊಂದು ಅಕ್ಷರ, ಪ್ರತಿಯೊಂದು ಚಿತ್ರ ಮತ್ತು ಪ್ರತಿಯೊಂದು ಕಾವ್ಯವೂ ವಿದ್ಯಾರ್ಥಿಗಳ ಕಲ್ಪನೆ, ಆತ್ಮಸಾಕ್ಷಾತ್ಕಾರ ಮತ್ತು ಮಹತ್ವಾಕಾಂಕ್ಷೆಯ ಪ್ರತಿಫಲವಾಗಿದೆ.ಇಂದಿನ ವಿದ್ಯಾರ್ಥಿಗಳು ನಾಳೆಯ ಭವಿಷ್ಯ ನಿರ್ಮಾತಾಗಳು. ಅವರ ಉಜ್ವಲ ಭಾವನೆಗಳು ಮತ್ತು ಬುದ್ಧಿವಂತಿಕೆಯನ್ನು ಪ್ರೋತ್ಸಾಹಿಸಲು ಈ ಪತ್ರಿಕೆ ಒಂದು ವೇದಿಕೆ.

ಪಠ್ಯಾತೀತ ಚಟುವಟಿಕೆಗಳು, ಸಾಹಿತ್ಯ, ಕಲೆ, ಮತ್ತು ಸೃಜನಶೀಲ ಬರಹಗಳ ಮೂಲಕ ಅವರು ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ಪಡೆದಾಗ, ಅದು ಅವರಿಗೆ ಕೇವಲ ಆತ್ಮವಿಶ್ವಾಸವನ್ನು ನೀಡುವುದಷ್ಟೇ ಅಲ್ಲ ಉಜ್ವಲ ಭವಿಷ್ಯದ ಪ್ರಾರಂಭವನ್ನೂ ಸೂಚಿಸುತ್ತದೆ.ಅವರು ಅಕ್ಷರಗಳಲ್ಲಿ ವಿವರಿಸಿದ ಕನಸುಗಳು, ತಮ್ಮ ಬರಹಗಳಲ್ಲಿ ಕೊರೆದ ಭಾವನೆಗಳು ಕೃಷಿ ಮಹತ್ವದ ಚಿತ್ರಣವನ್ನು ಸಿಂಗರಿಸುತ್ತವೆ. ಈ ಸುಂದರ ಪ್ರಯತ್ನವನ್ನು ಪ್ರೋತ್ಸಾಹಿಸಲು ಈ ಪತ್ರಿಕೆ ಒಂದು ನೆಲೆಗಟ್ಟಾಗಿದೆ. ನೇಗಿಲ ಸಿರಿ ನಮಗೆ ಮಾತ್ರವಲ್ಲ, ಈ ಪೀಳಿಗೆಗೆ ದೀಪವಾಗಲಿ ಎಂಬ ಆಶಯದೊಂದಿಗೆ, ವಿದ್ಯಾರ್ಥಿಗಳ ಈ ಸೃಜನಶೀಲತೆಯ ಹಾದಿಯಲ್ಲಿ ನಾವು ಎಲ್ಲರೂ ಜೊತೆ ನಿಂತು ಅವರ ಮುನ್ನುಗ್ಗುವ ಹೆಜ್ಜೆಗಳಿಗೆ ಸ್ಫೂರ್ತಿಯ ವಾತಾವರಣವನ್ನು ಸೃಷ್ಟಿಸೋಣ. "ಸೃಜನಶೀಲತೆಯ ಹೊಳೆ ಹರಿಯಲಿ, ಅವರ ಭಾವನೆಗಳು ಬೆಳಗಲಿ" ಎಂದು ಹಾರೈಸುತ್ತೇನೆ.

**ನೇಗಿಲ ಸಿರಿ** 'ಇದು ಜ್ಞಾನ, ಕನಸು ಮತ್ತು ಭಾವನೆಗಳ ಹೊತ್ತ ಸವಾರಿ'.

**ಡಾ. ಎಂ. ಹನುಮಂತಪ್ಪ**
**ಗೌರವಾನ್ವಿತ ಕುಲಪತಿಗಳು**
**ಕೃ.ವಿ.ವಿ.ರಾಯಚೂರು**

# ಭಾವನಾತ್ಮಕ ಬರವಣಿಗೆಯ ಐಸಿರಿ – ನೇಗಿಲ ಸಿರಿ



ಕೃಷಿಯು ಕೇವಲ ಭೌತಿಕ ಪರಿಶ್ರಮವಷ್ಟೇ ಅಲ್ಲ, ಅದು ಜೀವನಶೈಲಿ, ಸಂಸ್ಕೃತಿ, ಮತ್ತು ಕಲೆಯೊಂದಿಗಿನ ಹೃದಯಸ್ಪರ್ಶಿ ಸಂಬಂಧವೂ ಆಗಿದೆ. **ನೇಗಿಲ ಸಿರಿ** ಎಂಬ ಈ ಸಂಚಿಕೆಯಲ್ಲಿ ಕೃಷಿ ವಿದ್ಯಾರ್ಥಿಗಳು ತಮ್ಮ ಅನನ್ಯ ದೃಷ್ಟಿಕೋನವನ್ನು ಕವನ, ಲೇಖನ, ಚಿತ್ರಕಲೆಗಳ ಮೂಲಕ ವ್ಯಕ್ತಪಡಿಸಿದ್ದಾರೆ.ಕೃಷಿ ಕೇವಲ ಆಹಾರದ ಉತ್ಪಾದನೆಯ ಭಾಗವಲ್ಲ; ಅದು ಭೂಮಿಯ ತಾಯಿಯೊಂದಿಗೆ ನಡೆಯುವ ನಿರಂತರ ಸಂವಾದ. ರೈತನ ದುಡಿಮೆ, ಮಣ್ಣಿನ ತೊಟ್ಟಿಲಿನಲ್ಲಿ ಮೊಳಗುವ ನವ ಜೀವನ, ಪ್ರಕೃತಿಯೊಂದಿಗೆ ಬೆಸೆದುಹೋಗುವ ಅನುಭವ ಇವೆಲ್ಲವೂ ಕೃಷಿಯ ತತ್ವವನ್ನು ರೂಪಿಸುತ್ತವೆ. ಈ ನಿಯತಕಾಲಿಕೆ ಅದನ್ನು ತುಂಬಾ ಹತ್ತಿರದಿಂದ ಸೆರೆಹಿಡಿದಿದೆ.ನಮ್ಮ ವಿದ್ಯಾರ್ಥಿಗಳು ಕೃಷಿ ಪ್ರಕ್ರಿಯೆಗಳನ್ನಷ್ಟೇ ಅಲ್ಲ, ಅದರ ಆಂತರ್ಯವನ್ನೂ ತಮ್ಮ ಸಾಹಿತ್ಯ ಮತ್ತು ಕಲೆಗಳ ಮೂಲಕ ಅನಾವರಣಗೊಳಿಸಿದ್ದಾರೆ. ಅವರು ಬರಹಗಳಲ್ಲಿ ಹಬ್ಬದ ಸಂತಸವಿದೆ. ಈ ಕೃತಿಗಳು ಅವರ ಕೃಷಿ ಜ್ಞಾನಕ್ಕೆ ಜೊತೆಗೆ ಭಾವನಾತ್ಮಕ ಆಳವನ್ನೂ ಹೊಂದಿರುವುದಕ್ಕೆ ಸಾಕ್ಷಿಯಾಗಿದೆ.

**ನೇಗಿಲ ಸಿರಿ** ನಿಯತಕಾಲಿಕೆಯು ಕೃಷಿ ಪಾಠಶಾಲೆಯ ಕಲಾವಿದ ಮನಸ್ಸುಗಳಿಗೆ ಒಂದು ವೇದಿಕೆ. ಇದು ಬರೆಯುವ, ಚಿತ್ರಿಸುವ, ಮತ್ತು ಅಭಿವ್ಯಕ್ತಿಯ ಅವಕಾಶ ನೀಡುವ ಒಂದು ಸುವರ್ಣಚಿಗುರು. ಕೃಷಿಯ ಅರಿವನ್ನು ಕಲೆಯ ರೂಪದಲ್ಲಿ ತಲುಪಿಸುವ ಈ ಪ್ರಯತ್ನಕ್ಕಾಗಿ ನಾನು ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತೇನೆ.

ನಮ್ಮ ಭವಿಷ್ಯದ ಕೃಷಿಕರು ಕೇವಲ ಶಾಸ್ತ್ರೀಯ ಜ್ಞಾನವಲ್ಲ, ಕಲಾತ್ಮಕ ಮನಸ್ಸುಗಳೂ ಆಗಿರಬೇಕು. ಈ ನಿಯತಕಾಲಿಕೆ ಆ ದಿಕ್ಕಿನತ್ತ ಒಯ್ಯುವ ಒಂದು ಸುಂದರ ಪ್ರಯತ್ನ. ಎಲ್ಲಾ ಲೇಖಕರಿಗೆ, ಕವಿಗಳಿಗೆ, ಚಿತ್ರಕಾರರಿಗೆ, ಹಾಗೂ ಸಂಪಾದಕರಿಗೆ ನನ್ನ ಹಾರ್ದಿಕ ಶುಭಾಶಯಗಳು.

**ಡಾ. ಎಂ.ಹನುಮಂತಪ್ಪ**
**ಶಿಕ್ಷಣ ನಿರ್ದೇಶಕರು ಮತ್ತು ಅಧ್ಯಕ್ಷರು, ಕನ್ನಡ ಘಟಕ**
**ಕೃ.ವಿ.ವಿ.ರಾಯಚೂರು**

# ಕಲೆ ಸಾಹಿತ್ಯದ ಗರಿ – ನೇಗಿಲ ಸಿರಿ



ಕೃಷಿಯು ನಮ್ಮ ಸಮೃದ್ಧಿ, ಸಂಸ್ಕೃತಿ, ಮತ್ತು ಸ್ವಾವಲಂಬನೆಯ ನಾಂದಿ. **ನೇಗಿಲ ಸಿರಿ** ಎಂಬ ಶೀರ್ಷಿಕೆಯಡಿ, ಈ ನಿಯತಕಾಲಿಕೆಯಲ್ಲಿ ಕೃಷಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಹರಡಿ, ಅವರ ಚಿಂತನೆಯನ್ನು ಸಮಾಜದ ಮುಂದೆ ತರುವ ಒಂದು ಪುಟ್ಟ ಪ್ರಯತ್ನವಾಗಿದೆ.

ಇಲ್ಲಿ, ಕವಿತೆಗಳು ಹೃದಯವನ್ನು ಸ್ಪರ್ಶಿಸುತ್ತವೆ, ಲೇಖನಗಳು ಹೊಸ ಚಿಂತನೆಗೆ ಪ್ರೇರೇಪಿಸುತ್ತವೆ, ಕವನಗಳು ಬದುಕಿನ ಮೌಲ್ಯಗಳನ್ನು ಒತ್ತಿಹೇಳುತ್ತವೆ, ಮತ್ತು ಚಿತ್ರಕಲೆಗಳು ಕೃಷಿ ಜೀವನದ ವೈವಿಧ್ಯತೆ ಮೂಡಿಸುತ್ತವೆ.

ವಿದ್ಯಾರ್ಥಿಗಳು ಕೃಷಿಯ ಪರಿಕಲ್ಪನೆಗೆ ಹೊಸ ಆಯಾಮ ನೀಡುವಂತೆ, ಈ ಮಾಧ್ಯಮವು ಅವರಲ್ಲಿನ ಸಾಹಿತ್ಯ–ಕಲಾತ್ಮಕ ಪ್ರತಿಭೆಗಳಿಗೆ ವೇದಿಕೆಯಾಗುತ್ತಿದೆ. ಈ ಅಪರೂಪದ ಪ್ರಯತ್ನವನ್ನು ಮೆಚ್ಚಿ, ಪ್ರೋತ್ಸಾಹಿಸಿ, ಪಾಲ್ಗೊಳ್ಳಿ.

"ಕೃಷಿ ಕಲೆ, ಸಾಹಿತ್ಯದ ಗರಿ,– ನಮ್ಮ ನೇಗಿಲ ಸಿರಿ" ಎಂದು ಹೇಳುತ್ತಾ

ಕೃಷಿಯ ಬೆಳವಣಿಗೆಯಲ್ಲಿ ಹೊಸ ಚಿಗುರು ಮೂಡಿಸುವ ನಮ್ಮ **ನೇಗಿಲ ಸಿರಿ** ಪತ್ರಿಕೆಗೆ ಶುಭಾಶಯಗಳನ್ನು ತಿಳಿಸುತ್ತೇನೆ.

**ಡಾ. ಗುರುರಾಜ್. ಸುಂಕದ**
**ಕುಲಸಚಿವರು**
**ಕೃ.ವಿ.ವಿ.ರಾಯಚೂರು**

## ಪ್ರತಿಭೆಗಳನ್ನು ಅನಾವರಣಗೊಳಿಸುವ ಕಸ್ತೂರಿ – ನೇಗಿಲ ಸಿರಿ



ಕೃಷಿಯು ನಮ್ಮ ಸಂಸ್ಕೃತಿ, ಜೀವನ ಮತ್ತು ಅಸ್ತಿತ್ವದ ಅವಿಭಾಜ್ಯ ಅಂಗ. ಶ್ರಮ, ನಿಸರ್ಗದ ಆರಾಧನೆ, ಮಣ್ಣಿನ ಮಮತೆ–ಇವು ಕೃಷಿಕನ ದಿನಚರಿಯ ಅವಿಭಾಜ್ಯ ಭಾಗಗಳು. ಇಂತಹ ಸಿರಿಗನ್ನಡ ನಾಡಿನಲ್ಲಿ, **ನೇಗಿಲ** ಸಿರಿ ಎಂಬ ನಿಯತಕಾಲಿಕೆ ಕೃಷಿ, ಕಲೆ ಮತ್ತು ಸಾಹಿತ್ಯವನ್ನು ಒಟ್ಟುಗೂಡಿಸುವ ಸುಂದರ ವೇದಿಕೆಯಾಗಿದ್ದು, ಯುವ ಕೃಷಿ ವಿದ್ಯಾರ್ಥಿಗಳ ಸೃಜನಶೀಲತೆಗೆ ಹೆಜ್ಜೆಹಾಸಾಗುತ್ತಿದೆ.ಈ ಪತ್ರಿಕೆಯಲ್ಲಿ ಪ್ರಸ್ತುತವಾಗುತ್ತಿರುವ ಲೇಖನಗಳು, ಕವನಗಳು, ಕವಿತೆಗಳು ಮತ್ತು ಚಿತ್ರಕಲೆಗಳು ವಿದ್ಯಾರ್ಥಿಗಳ ಮನೋಭಾವ, ಅವರ ತಾತ್ವಿಕತೆ ಮತ್ತು ಕೃಷಿಯ ಮೇಲಿನ ಅಭಿಮಾನವನ್ನು ಪ್ರತಿಬಿಂಬಿಸುತ್ತವೆ.

ನಾಡಿನ ಕೃಷಿಕ ಸಮುದಾಯ ಮತ್ತು ಕೃಷಿ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿ, ಅವರ ಮನದಾಳದ ಭಾವನೆಗಳಿಗೆ ಸಾಹಿತ್ಯದ ರೂಪ ನೀಡಲು ಇದು ಒಳ್ಳೆಯ ವೇದಿಕೆಯಾಗಿದೆ. **ನೇಗಿಲ ಸಿರಿ** ಪರಿಶ್ರಮದ ಪ್ರತೀಕ, ಈ ಪತ್ರಿಕೆ ಕೃಷಿ ವಿದ್ಯಾರ್ಥಿಗಳ ಸೃಜನಶೀಲತೆಯನ್ನು ಹಬ್ಬಿಸುವ ತಾಣ. ಈ ಉದಯಮಾನ ತಲೆಮಾರಿಗೆ ಇದು ಹೊಸ ಪಥದ ದೀಪವಾಗಿ ಜ್ಯೋತಿ ಬೆಳಗಲಿ. ಈ ಪ್ರಯತ್ನಕ್ಕೆ ಹಾರ್ದಿಕ ಶುಭಾಶಯಗಳು.

**ಡಾ. ಜಾಗೃತಿ. ಬಿ. ದೇಶಮಾನ್ಯ**
**ಡೀನ್ (ಸ್ನಾತಕೋತ್ತರ)**
**ಕೃ.ವಿ.ವಿ.ರಾಯಚೂರು**

# ಶ್ರದ್ಧೆ, ಶ್ರಮ, ಮತ್ತು ಚೈತನ್ಯವೇ 'ನೇಗಿಲ ಸಿರಿ'



ವಿದ್ಯಾರ್ಥಿಗಳಾ, ನಿಮ್ಮ ಪ್ರತಿಭೆಯ ಹೊಳಹುಗಳು **ನೇಗಿಲ ಸಿರಿ** ಯಲ್ಲಿ ಪ್ರಕಾಶಿಸಲೆಂದು ನಾವು ನಿಮಗೆ ಒಂದು ವೇದಿಕೆಯನ್ನು ಸಜ್ಜುಮಾಡಿದ್ದೇವೆ. ಕಾವ್ಯ, ಕತೆ, ಕಾದಂಬರಿ ಅಥವಾ ಇನ್ನೀತರ

ಕೌಶಲ್ಯಗಳು ನಿಮ್ಮ ಉಸಿರಿನ ತೋಡಿನಂತೆ ಹರಿಯಬೇಕಾದದು. ಪ್ರತಿ ಶಬ್ಧ ನಿಮ್ಮ ಅಂತರಾಳದ ಆವೃತ್ತಿಯ ಪ್ರತಿ ಮೊಳಕೆಯಾಗಿರಲಿ. ವಿದ್ಯಾರ್ಥಿ ಜೀವನವು ಕೇವಲ ಪಾಠ ಮತ್ತು ಪರೀಕ್ಷೆಗಳ ಒಳಮಟ್ಟದಲ್ಲಿಲ್ಲ. ಅದು ನಿಮ್ಮ ಕಲ್ಪನೆ, ನಿಮ್ಮ ಚಿಂತನೆ, ನಿಮ್ಮ ಕನಸುಗಳಿಗೆ ಗತಿ ನೀಡುವ ಹಾದಿಯೂ ಆಗಿದೆ.ಇಲ್ಲಿ ಪ್ರಕಟವಾಗುವ ಕೃತಿಗಳು, ನೀವು ಸಾಧನೆ ಮಾಡಲು ಒಂದು ಹೊಸ ಪ್ರೇರಣೆಯಾಗಿ ಕೆಲಸ ಮಾಡಲಿ. ನಿಮ್ಮ ಆತ್ಮಸಫಲತೆ ಮತ್ತು ಕೌಶಲ್ಯವು ಈ ನೇಗಿಲ ಸಿರಿಯ ಕಾಗದಗಳಲ್ಲಿ ಚಿರಕಾಲ ಪ್ರಚಂಡವಾಗಿರಲಿ ಎಂದು ಹಾರೈಸುತ್ತೇನೆ. ನಿಮ್ಮ ಶ್ರದ್ಧೆ, ಶ್ರಮ, ಮತ್ತು ಚೈತನ್ಯವೇ ನಮ್ಮ ನೇಗಿಲ ಸಿರಿಗೆ ಸೂರ್ಯಪ್ರಕಾಶ. ಬನ್ನಿ, ನಿಮ್ಮ ಕಲೆಗಳ ಮೂಲಕ ಹೊಸದೊಂದು ಬೆಳಕು ಹರಡಿ!

**ಡಾ. ಯು . ಸತೀಶ್ ಕುಮಾರ್**
**ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ) ಮತ್ತು**
**ಸಂಪಾದಕರು, ಪ್ರಕಟಣಾ ಕೇಂದ್ರ, ಕೃ.ವಿ.ವಿ. ರಾಯಚೂರು**

# ಪ್ರತಿಭೆಗಳನ್ನು ಹೊರಸೂಸುವ ಸಾಧನ




**ನೇಗಿಲ** ಸಿರಿ ಒಂದು ಕೃಷಿ ಮಹಾವಿದ್ಯಾಲಯ, ರಾಯಚೂರಿನ ಅರ್ಧವಾರ್ಷಿಕ ನಿಯತಕಾಲಿಕೆಯಾಗಿದೆ. ನೇಗಿಲ ಸಿರಿ ಎಂದರೆ ನಮ್ಮ ಕೃಷಿ ವಿದ್ಯಾರ್ಥಿಗಳ, ಪ್ರಾಧ್ಯಾಪಕ ಮತ್ತು ಸಿಬ್ಬಂಧಿ ವರ್ಗದವರ ಕನ್ನಡ ಭಾಷಾ ಲಿಪಿಯ ಪ್ರತಿಭೆಯನ್ನು ಹೊರಹಾಕುವ ಸಂಪತ್ತು. ನಮ್ಮ ಕನ್ನಡ ನಾಡಿನ ಕೃಷಿ ಜಗತ್ತಿನಲ್ಲಿ ಮಾತೃ ಭಾಷೆಯಾದ ಕನ್ನಡಕ್ಕೆ ಬಹಳ ಮಹತ್ವವಿದೆ. ನಮ್ಮ ಕೃಷಿ ವಿದ್ಯಾರ್ಥಿಗಳ ಕನ್ನಡ ಭಾಷಾ ಸಾಮರ್ಥ್ಯವನ್ನು ಮತ್ತು ಪ್ರತಿಭೆಯನ್ನು ಅಳೆಯುವ ಸಾಧನವೇ ನೇಗಿಲ ಸಿರಿ ಎಂದರೂ ತಪ್ಪಾಗಲಾರದು.

**ನೇಗಿಲ** ಸಿರಿ ಒಂದು ಅಪೂರ್ವವಾದ ನಿಯತಕಾಲಿಕೆಯಾಗಲಿದೆ ಎಂಬ ಭರವಸೆ ನನಗಿದೆ. ಏಕೆಂದರೆ, ಈ ಹಿಂದೆ ವಿದ್ಯಾರ್ಥಿಗಳ, ಪ್ರಾಧ್ಯಾಪಕ ಮತ್ತು ಸಿಬ್ಬಂಧಿ ವರ್ಗದವರ ಕನ್ನಡ ಲಿಪಿಯ ಪ್ರತಿಭೆಯನ್ನು ಹೊರಹಾಕಲು ಯಾವುದೇ ನಿಯತಕಾಲಿಕೆ ಇರಲಿಲ್ಲ. ಇದೊಂದು ನಮ್ಮ ಮಹಾವಿದ್ಯಾಲಯದ ಕನ್ನಡ ಸಂಘದ ಹೊಸ ಪ್ರಯೋಗವಾಗಿದೆ. ಈ ಹೊಸ ಪ್ರಯೋಗವಾಗದಲ್ಲಿ ನಮ್ಮ ಕನ್ನಡ ಸಂಘವು ಹೊಸ ಹೊಸ ಪ್ರತಿಭೆಗಳನ್ನು ಗುರುತಿಸಿ, ಸಾಹಿತ್ಯ ಕ್ಷೇತ್ರಕ್ಕೆ ಒಂದು ಪ್ರಬುದ್ಧವಾದ ಸಾಹಿತಿ,ಕವಿ,ಲೇಖಕರನ್ನು ಕೊಡಲಿ ಎಂದು ಆಶಿಸುತ್ತೇನೆ. ಕನ್ನಡ ಸಂಘದ ನೇಗಿಲ ಸಿರಿಗೆ ಶುಭವಾಗಲಿ, ಧನ್ಯವಾದಗಳು.

**ಡಾ. ನಾರಾಯಣರಾವ್ ಕೆ.**
**ಡೀನ್(ಕೃಷಿ)**
**ಕೃ .ಮ.ವಿ. ರಾಯಚೂರು**

# ಕವನಗಳು

## ನೇಗಿಲ ಸಿರಿ

ಶ್ರೀಮಂತರಿಗೆ ಹಣ ಮತ್ತು ಬೆಲೆಬಾಳುವ ವಸ್ತುಗಳೇ ಸಿರಿ,
ಸೈನಿಕರಿಗೆ  ಶಸ್ತ್ರಾಸ್ತ್ರಗಳೇ ಸಿರಿ,
ಅಧ್ಯಾಪಕರಿಗೆ ಪುಸ್ತಕಗಳೇ ಸಿರಿ,
ರೈತರಿಗೆ ನೇಗಿಲೇ ಸಿರಿ,
ನಮ್ಮ ರಾಯಚೂರಿನ ಕೃಷಿ ವಿದ್ಯಾರ್ಥಿಗಳಿಗೆ
ಅರ್ಧವಾರ್ಷಿಕ ನಿಯತಕಾಲಿಕೆಯಾದ ' ನೇಗಿಲ ಸಿರಿ' ಯೇ ಬಹು ದೊಡ್ಡ ಸಿರಿ.

**ಡಾ. ವಿಶ್ವನಾಥ. ಎಸ್.**
ಪ್ರಾಧ್ಯಾಪಕರು ಬೇಸಾಯ ಶಾಸ್ತ್ರ ವಿಭಾಗ,
ಕೃಷಿ ಮಹಾವಿದ್ಯಾಲಯ, ರಾಯಚೂರು

## ಕೃಷಿ ಮಹಾವಿದ್ಯಾಲಯ ರಾಯಚೂರು

ಮೌರ್ಯ ಸಾಮ್ರಾಜ್ಯದಿಂದ ಮೊಘಲರವರೆಗೆ
ಆಳಲ್ಪಟ್ಟ ಕೋಟೆ ನಾಡು ನಮ್ 'ರಾಯಚೂರು'
ಈ ಬಿಸಿಲೂರಿನ ಮಧ್ಯದಲ್ಲಿರುವುದು ಕೃಷಿ ಮಹಾವಿದ್ಯಾಲಯವೆಂಬ 'ಹೊನ್ನಿನ ತೇರು'
ತೇರಿನೊಳಗಿಹ ಸುರಸಪ್ನ ರತ್ನಗಳಂತೆ ಇಲ್ಲಿನ 'ಪ್ರಾಧ್ಯಾಪಕರು'
ರತ್ನಗಳು ಸೋಸಿದ ಜ್ಞಾನಬೆಳಕು ಪಡೆದ ಅದೆಷ್ಟೋ ಶಿಷ್ಯ ಭಕ್ತರು,
ಯಶಸ್ಸಿನ ಉತ್ತುಂಗದಲಿ ಬದುಕು ಕಟ್ಟಿಕೊಂಡಿರುವರು

**ಸ್ವಾತಿ ಟೆಂಗೂರಿ**
ಅಂತಿಮ ವರ್ಷದ ಕೃಷಿ ವಿದ್ಯಾರ್ಥಿನಿ

## ಮಾಡಿರುವೆ ಪ್ರೀತಿ

ತಿಳಿಸದೇ ಮಾಡಿರುವೆ ಪ್ರೀತಿಯ,

ತಿಳಿದರೆ ಕೊಡದಿರು ಶಿಕ್ಷೆಯ,

ಒಂದೊಮ್ಮೆ ನನ್ನ ಹೃದಯಕ್ಕೆ ಹೆಜ್ಜೆಯಿಡು,

ಮನಸ್ಸು ಬಿಚ್ಚಿ ಬಾಚಿ ತಬ್ಬಿಬಿಡು,

ಮತ್ತೇನು ಬಯಸದು ನನ್ನ ಹೃದಯ,

ನಿನ್ನ ಒಲವಷ್ಟೇ ಸಾಕು ಈ ಸಮಯ.

ವಾ.ಪಾ.

**(ವಾಗೇಶ.ಎಮ್.ಪಾಟೀಲ್)**

## ಕವಿ

ಕವಿಯಂದರೇ...

ಸೌಂದರ್ಯದ ಆರಾಧಕನು,

ನಿಸರ್ಗದ ಸೊಬಗನ್ನು ಪದಗಳಿಂದ ಪೂಜಿಸುವ ಅರ್ಚಕನು,

ಕವಿಯೆಂದರೇ...

ತನ್ನೆಲ್ಲಾ ನೋವುಗಳನ್ನು ರಚಿಸಿದ ಪದಗಳೆದುರು ನೆನೆದ ಕಣ್ಣಗಳನ್ನೊರೆಸಿಕೊಂಡು ಸುಮ್ಮನಾದವನು

ಕವಿಯಂದರೇ...

ತನ್ನ ಆಂತರ್ಯದ ಭಾವಗಳನ್ನು ಲೇಖನಿಯ ಶಾಹಿರಕ್ಕೆ ತುಂಬಿ ಮನಸಾರೆ ಖಾಲಿ ಪುಟಗಳಿಗೆ ಜೀವ ತುಂಬುವ ದೇವನು.

**ಸ್ವಾತಿ ಟೆಂಗೂರಿ**

ಅಂತಿಮವರ್ಷದ ಕೃಷಿ ವಿದ್ಯಾರ್ಥಿನಿ

# ಕವಿತೆಗಳು

# ಕನ್ನಡ

ಕನ್ನಡವೆಂದರೆ ಬರೀ ಭಾಷೆಯೇ,
ಮನಸ್ಸಿನ ಮಾತಿನ ಧ್ವನಿ ' ಕನ್ನಡ'
ಬವಣೆ ಬಣ್ಣಿಪಗಳ ಸಾರ ' ಕನ್ನಡ '
ಒಳದನಿಯ ಭಾವದ ಕೊಂಡಿ ' ಕನ್ನಡ '
ಬಿರು ಬಿಸಿಲಿನ ಬೇಗೆಯ ಧಗೆಯಲ್ಲೂ' ಕನ್ನಡ '
ಕಹಿ ಚಳಿಯ ಕಂಪಲ್ಲೂ ' ಕನ್ನಡ '
ಆಡಲು ಭಾಷೆ ನೂರಿದ್ದರೇನು ಅರಿಯುವ
ಭಾಷೆ ಕನ್ನಡವಲ್ಲವೇ?

ಅಳುವ ಕಂದನ ರಮಿಸುತ ನುಡಿವ
ಜೋಲಾಲಿಯ ಹಾಡಿನ ಸೆಲೆಯೇ ಕನ್ನಡ
ನಮ್ಮೆದೆಯಲ್ಲಿನ ನೋವಿಗೂ – ನಲಿವಿಗೂ
ಜೋಕಾಲಿಯಲ್ಲವೇ ನಮ್ಮ ಕನ್ನಡ
ಚಿಗುರು ಮೀಸೆಯ ಹುಡುಗನ ಒಲವಿಗೂ
ಚಿಗರಿ ಕಂಗಳ ಹುಡುಗಿಯ ಚೆಲುವಿಗೂ
ಕಟ್ಟಿದ ಸೇತುವೆ "ಕನ್ನಡ "...

ಮುತ್ತಿನ ಪದಗಳ ಪೋಣಿಸಿ ಹೆಣೆದ
ಸಾಲಿನ ಸಾರವೇ ಈ ರಮಣಿ
ಬಾಗು ಬಳುಕುಗಳ ಮೈದುಂಬಿಕೊಂಡು
ನಲಿಯುವಳೀ "ವಿಶ್ವ ಲಿಪಿಗಳ ರಾಣಿ"
ಅರಿಶಿಣ ಕುಂಕುಮದ ಸಿಂಧೂರವನಿಟ್ಟು

ಹಸಿರು ಸೀರೆಯ ಹೊದ್ದಿಹಳು
ಸಾರುತಿಹಳು ಜಗಕ್ಕೆಲ್ಲ
ಸಂಸ್ಕೃತಿಯ ಬುನಾದಿ
ಕರುನಾಡು " ಎಂದು.
ಧನ್ಯ ನಾನು, ಹುಟ್ಟಿದೆನು ಇಲ್ಲಿ,
ಪಾಲನೆ ಪೋಷಣೆ ಮಾಡುವಳು
ತಾಯಿಯಲ್ಲವೇ ಕನ್ನಡಮ್ಮ...

– **ಜಿ.ಬಸವರಾಜ್**
**ಸ್ನಾತಕೋತ್ತರ ವಿದ್ಯಾರ್ಥಿ**

## ಪುಣ್ಯ ಭೂಮಿ ಭಾರತ

ಭಾರತ ದೇಶವು ಸ್ವತಂತ್ರ್ಯ ದೇಶವು
ಭಾರತ ಭೂಮಿಯೂ ಪುಣ್ಯ ಭೂಮಿಯು
ಹಸಿರು ಬಣ್ಣ ನಮ್ಮ ಭೂಮಿ
ಕೋಟಿ ಕೋಟಿ ಜನರ ಜನ್ಮಭೂಮಿ
ಹಸಿರು ಬಣ್ಣ ನಮ್ಮ ಭೂಮಿ
ಕೋಟಿ ಕೋಟಿ ಜನರ ಜನ್ಮಭೂಮಿ
ಭಾರತ ಆಹಾ,ಭಾರತ ಆಹಾ,ಭಾರತ ಆಹಾ,
ದುಡಿದು ಬೆವರ ಸುರಿಸಿ ನಾವು
ಪುಣ್ಯ ಭೂಮಿಯಿಂದ ಮುತ್ತು ಪಡೆದು
ದುಡಿದು ಬೆವರ ಸುರಿಸಿ ನಾವು
ಪುಣ್ಯ ಭೂಮಿಯಿಂದ ಮುತ್ತು ಪಡೆದು
ಭಾರತ ಆಹಾ,ಭಾರತ ಆಹಾ,
ದ್ವೇಷ ರೋಷ ತೊರೆದು ನಾವು
ಸತ್ಯ ಶಾಂತಿಯಿಂದ ಮುಂದೆ ಸಾಗಿ
ದ್ವೇಷ ರೋಷ ತೊರೆದು ನಾವು
ಸತ್ಯ ಶಾಂತಿಯಿಂದ ಮುಂದೆ ಸಾಗಿ
ಭಾರತ ಆಹಾ, ಭಾರತ ಆಹಾ, ಭಾರತ ಆಹಾ,
ಜಾತಿ ಭೇದ ಭಾವ ಮುರಿದು
ನಾವು ಏಕೆಮಾತೆ ಪುತ್ರರೆಂದು ಜಾತಿ ಭೇದ
ಭಾವ ಮುರಿದು
ನಾವು ಏಕೆಮಾತೆ ಪುತ್ರರೆಂದು
ಭಾರತ ಆಹಾ,ಭಾರತ ಆಹಾ,ಭಾರತ ಆಹಾ,

**–ಶ್ರೀಮತಿ ನಾಗರತ್ನ, ಶಿಕ್ಷಕರು**
**ಕನ್ನಡ ವಿಭಾಗ. ಕೃ.ಮ.ವಿ. ರಾಯಚೂರು**

## ನಾ ಕಂಡ ಯೋಧ

ಭರತಖಂಡದೊಳ್ ಕಿರಿದಿರ್ದ ಕಾನನದಿ
ಭಾರತಾಂಬೆಯ ಪಾದಲತೆಗಳಲ್ಲಿ ಕಂಪಿಸುವ
ಚಂಪಕನಿವನು

ನಾಡ ಕಾಪಿನೊಳ್ ಇದ್ದು, ಪ್ರತಿಪಾಲಿಸುವ
ಕಜ್ಜಕ್ಕೆ ಮರಳಲು ಅಣಿಯಾದನು...,

ದೇಶ ರಕ್ಷಣೆಯ ಭಾಷೆನೀಡಿ ಪಿತೃವಿನ
ಚರಣಗಳಿಗೆ ಪೊಡವಟ್ಟ ತಿಲಕ ಕಸವರ
ತನುಜನಿವನು...

ಸೈನ್ಯಕಪ್ಪಡದಲ್ಲಿ ತೇಜದ ಪೆರೆಯಂತೆ
ಪ್ರಜ್ವಲಿಸುವನೀತ 'ನಾ ಕಂಡ ಯೋಧನು'

**–ಸ್ವಾತಿ ಟೆಂಗೂರಿ**
**ಅಂತಿಮ ವರ್ಷದ ಕೃಷಿ ವಿದ್ಯಾರ್ಥಿನಿ**

## ಕರುಣಿಸು ಭೂತಾಯಿ

ಕರುಣಿಸು ಭೂತಾಯಿ.... ನೀ ಕರುಣಿಸು,
ನಿನ್ನ ನಂಬಿದ ರೈತನಿಗೆ ನೀ ಕರುಣಿಸು,
ಕಷ್ಟ ಎನ್ನದೆ ಸುಖ ಎನ್ನದೆ ದುಡಿಯುತ್ತಿಹನು ನಿತ್ಯ,
ಈತನೇ ಬಲ್ಲ ಕಷ್ಟ ಎಂಬುದರ ಸತ್ಯ,
ಎಲ್ಲರ ಹಸಿವಿಗೆ ಅನ್ನ ನೀಡುವ ದಾತ,
ದೇಶದ ಬೆನ್ನೆಲುಬಾಗಿ ನಿಂತ,
ಕಾಯಕವೇ ಕೈಲಾಸ ಎಂದು ನಂಬಿದಾತ,
ಈತನೇ ನಿಸ್ವಾರ್ಥ ಮಹಾದಾನಿ,
ತಾಯಿ ಆಗದಂತೆ ನೋಡು ಹಾನಿ,
ಈತನ ಅಳಿವು ನೀನೆ, ಇತನ ಉಳಿವು ನೀನೆ,
ಲಾಭವೂ ನೀನೆ,ನಷ್ಟವೂ ನೀನೆ,
ಉತ್ತಮ ಇಳುವರಿ ಈತನಾಸೆ,
ತಾಯಿ ಮಾಡದಿರು ನಿರಾಸೆ,
ಕರುಣಿಸು ಭೂತಾಯಿ... ನೀ ಕರುಣಿಸು....
ನಿನ್ನ ನಂಬಿದ ರೈತನಿಗೆ ನೀ ಕರುಣಿಸು......

– ರಘುನಾಥ್.ಪವಾರ್

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿ

## ಅನ್ನದಾತ

ಬಸವಗೆ ಕೈಜೋಡಿಸಿ ಬಂಡಿ ಹೂಡಿದ ರೈತ,
ಜೋಡೆತ್ತಿಗಿಲ್ಲ ಯಾವುದೇ ಸ್ವಾರ್ಥ,
ಸಾಗಿತು ಪಯಣ ಹೊಲದೆಡೆಗೆ
ಉಳುವ ಬಿತ್ತುವ ಕೆಲಸದಡೆಗೆ.
ಜೋಡೆತ್ತು ರೈತನ ಬಲಗೈ ಬಂಟರು,
ಇವರಲ್ಲಿಲ್ಲ ಯಾವುದೇ ತಕರಾರು,
ರೈತನೇ ಇಲ್ಲಿ ಹರಿಕಾರ,
ಜೋಡೆತ್ತುಗಳು ಇವನಿಗೆ ಸಹಕಾರ.
ದುಡಿವರು ಮೂವರು ಗದ್ದೆಯಲ್ಲಿ,
ತಾಳ್ಮೆ,ಜಾಣ್ಮೆ ಮತ್ತು ಶ್ರದ್ಧೆಯಲ್ಲಿ ,
ಸ್ವಾರ್ಥವನ್ನು ದೂರ ಸರಿಸಿ.
ಭೂಮಿಯ ಉತ್ತಿ ಬೀಜವ ಬಿತ್ತಿ
ಬೆಳೆಯುವ ಒಳ್ಳೆ ಫಸಲನು
ಅನ್ನದಾತನೇ ಸರಿ ಇವನು
ನೀಡುವ ಎಲ್ಲರಿಗೂ ಅನ್ನವನು..

– ಭೂಮಿಕಾ

ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿನಿ

# ಚೈತ್ರದ ಚಿಗುರು

ಯುಗದ ಆದಿ ಯುಗಾದಿ ಮರಳಿ ಬರುತಿದೆ
ವನ ವನಗಳಲ್ಲಿ ಮರ ಗಿಡ ಬಳ್ಳಿಗಳಲ್ಲಿ
ವಸಂತ ಮಾಸವದು ಹೊಸದಾಗಿ ಅರಳುತಿದೆ
ವನದೇವಿ ಹಸಿರುಟ್ಟು ಸಂತಸದಿ ನಲಿಯುತಿದೆ
ಹೊಸವರುಷಕೆ ಹೊಸಹರುಷ
ಹೊರಹೊಮ್ಮುತಿದೆ
ಪ್ರಕೃತಿಯ ಪ್ರಥಮ ಮಾಸ ಚೈತ್ರ,
ಚೈತ್ರದ ಚಿಗುರಿನಂತೆಯೇ
ಬದುಕನ್ನು ಚಿಗುರಿಸಿ
ಹೊಸಭಾಷ್ಯ ಬರೆಯಲು ತವಕಿಸಿ
ಯುಗಾದಿ ಹೊಸತನವ ಹೊತ್ತು ತರುತಿದೆ
ಮೇಷರಾಶಿಗೆ ಸೂರ್ಯ ಸಾಗುವ ಸುದಿನ
ಸೌರಮಾನ ಯುಗಾದಿ ಆರಂಭದ ದಿನ
ಬ್ರಹ್ಮನ ಸೃಷ್ಟಿಗೆ ನೇಸರನ ಪ್ರಥಮ ಕಿರಣ
ಶ್ರೀ ವಿಷ್ಣು ಮತ್ಸ್ಯಾವತಾರ ತಾಳಿದ ದಿನ
ಬೇವು ರೂಪದ ನೋವುಗಳನ್ನೆಲ್ಲ ಪಕ್ಕಕ್ಕೆ ಸರಿಸಿ
ಪ್ರೀತಿ ಸ್ನೇಹಗಳ ಬೆಲ್ಲ ಒಂದಿಷ್ಟು ಬೆರಿಸಿ
ಬಹಳಷ್ಟು ಭರವಸೆ ಒಡಮೂಡಿಸುತ ಬರುತಿದೆ
ಚಂದ್ರಮಾನ ಯುಗಾದಿ
ಚೈತನ್ಯ ತರುತಿದೆ

ಮಳೆಹನಿ ಸುರಿಸಿ, ಬಿಸಿಲ ಬೇಗೆ ತಣಿಸಿ
ಸಸ್ಯಸಂಕುಲಗಳ ವೃದ್ಧಿಸಿ
ಕೋಗಿಲೆಯ ಕುಹೂ ಕುಹೂ ಹಾಡು
ಹೊಸ ಚಿಗುರು ವನಗಳಲೆಲ್ಲ..
ಹೆಕ್ಕಿ ತಿನ್ನುವ ಹಕ್ಕಿಗಳ ಇಂಪು ಹೆಮ್ಮರಗಳ
ಸಮೂಹಗಳಲಿ..
ಮನೆಮನಗಳಲಿ ತುಂಬಿಕೊಂಡಿರುವ
ಅಹಂ ಅನ್ನು ಅಳಿಸಿ
ಪ್ರೀತಿ –ಪ್ರೇಮಗಳ ಬಾಂಧವ್ಯ ವೃದ್ಧಿಸಲು
ಯುಗಯುಗಾದಿ ಯುಗಾದಿ
ಮರಳಿ ಮತ್ತೆ ಬರುತ್ತಿದೆ .!!!

**– ತನುಜಾ**

**ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿನಿ**

## ಯುಗಾದಿ

ಯುಗಾದಿ ಬಂತು ಹೊಸ ಆಶಯದಂತೆ
ರೈತನ ಕನಸು ನನಸಾಗುವ ದೀಪದಂತೆ
ಹಳೆ ನೋವು ಹೊಸ ಕನಸಿನಂತೆ
ಹಳೆ ಕಸಬು ಹೊಸ ಕುಸುಮದಂತೆ
ಮಳೆಗಾಲ ಬರುವ ಆಸೆ ಬೆಳೆಯಲಿ
ಕೃಷಿ ಗದ್ದೆಗಳಲ್ಲಿ ಹಸಿರು ಕಂಗೊಳಿಸಲಿ
ಬೆಳಕಿನ ತುಸು ತಂಪಾದ ಗಾಳಿ
ಹೊಸ ವರ್ಷದ ಹರ್ಷದ ಕಾಳಿ
ಜಮೀನಿಗೆ ಪ್ರೀತಿಯ ನೀರೆರಿಸಿ
ಬಿತ್ತಿದ ಹನಿ ಫಲವಾಗಿ ಮೂಡಲಿ
ಸಿರಿಧಾನ್ಯಗಳ ಮೊಗ್ಗರೋಣ
ಗದ್ದೆಯಲಿ
ಬೇವು ಬೆಲ್ಲದ ರುಚಿ ಸವಿದು
ಜೀವನದ ರಾಗ ಬೆಳಗಿಸೋಣ

**–ನಂದಿನಿ**

**ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿನಿ**

## ಯುಗಾದಿ ಪರ್ವ

ಬಂದಿಹುದು  ವಿಶ್ವವಸು ಸಂವತ್ಸರ ನೋಡ
ಕೇಳಬಯಸಿದೆ ಕಿವಿಗಳು ಕೋಗಿಲೆಯ ಹಾಡ ॥
ಪಸರಿಸಿಹುದು ಎಲ್ಲೆಡೆ ಹಕ್ಕಿಗಳ ಗಾನ ಕಲರವ
ತನುವಿಗೆ ಚೈತ್ರದ ತಂಗಾಳಿ ಅಪ್ಪಿದಂತೆ
ಅನುಭವ॥
ಈ ಯುಗಾದಿ ಪರ್ವದ ಸಂಕೇತ ಬೇವು
ಬೆಲ್ಲಗಳ ಮಿಶ್ರಣ
ಸಾಗಲಿ ಸುಖದುಃಖದ ಚಕ್ರಗಳಿಂದ ಬದುಕೆಂಬ
ಪಯಣ॥
ವಸಂತ ತಂದಿಹನು ಪ್ರತಿ ಜೀವಿಗಳಲ್ಲಿ
ಹೊಸಚೈತನ್ಯ
ಮತ್ತೊಮ್ಮೆ ಯುಗಾದಿ ಆಚರಿಸುತ್ತಿರುವ ನಾವೇ
ಧನ್ಯ॥

**ಭಾಗ್ಯಶ್ರೀ ಕೆ.ಕೆ**

**ತೃತೀಯ ವರ್ಷದ ಕೃಷಿ ವಿದ್ಯಾರ್ಥಿನಿ**

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

## ಸಂಕ್ರಾಂತಿ

ಎಲ್ಲಿ ಹೋಯಿತಯ್ಯ ನಮ್ಮಯ ಹಬ್ಬ.. ?

ಸಂತಸ ಹೊತ್ತು ತರುವ ಹಬ್ಬವು .. ಆಚರಣೆ
ಇಲ್ಲದ ರಜೆ ಹಬ್ಬವಾಗಿದೆ..

ಎಲ್ಲಿ ಹೋಯಿತಯ್ಯ ನಮ್ಮಯ ಹಬ್ಬ...?

ಸುಗ್ಗಿಯ ಋತುವಿನ ಆರಂಭದ ಹಬ್ಬವು ...
ಮರೆಯಾಗಿದೆ ಸಂಭ್ರಮವಿಲ್ಲದ ಹಬ್ಬವಾಗಿ...

ಎಲ್ಲಿ ಹೋಯಿತಯ್ಯ ನಮ್ಮಯ ಹಬ್ಬ...?

ಎಳು –ಬೆಲ್ಲವ ಬೀರುವ ಪೋರಿಯರ ಹಬ್ಬವು,
ಪರಿವರ್ತನೆಗೆ ಕಳೆದು ಹೋದ ಹಬ್ಬವಾಗಿದೆ..

ಎಲ್ಲಿ ಹೋಯಿತಯ್ಯ ನಮ್ಮಯ ಹಬ್ಬ..?

ಗಗನಕ್ಕೆ ಗಾಳಿಪಟ ಹಾರಿಸುವ ಪೋರರ ಹಬ್ಬವು,
ಮಾಯವಾಗಿ ಹೋಗಿದೆ ಆಚರಣೆ ಇಲ್ಲದ
ಹಬ್ಬವಾಗಿ...

ಎಲ್ಲಿ ಹೋಯಿತಯ್ಯ ನಮ್ಮಯ ಹಬ್ಬ...?

ಕುರುಡಾಗಿದೆ ನಮ್ಮಯ ಸಂಸ್ಕೃತಿ, ಆಚರಣೆ
ಇಲ್ಲದ ಈ ಕ್ರಾಂತಿ ಎಲ್ಲಿಯೂ ಹೋಗದಿರಲಿ,
ನಮ್ಮಯ ಸಂಸ್ಕೃತಿ ಎಲ್ಲರೂ ಸೇರಿ,
ಸಂಭ್ರಮಿಸೋಣ ಈ ಸಂಕ್ರಾಂತಿ...

**–ಲಕ್ಷ್ಮೀ ಪೂಜಾರಿ**

**ತೃತೀಯ ವರ್ಷದ ಕೃಷಿ ವಿದ್ಯಾರ್ಥಿನಿ**

## ಸಂಕ್ರಾಂತಿ ಹಬ್ಬ

ಸಂಕ್ರಾಂತಿ ರಜೆಯ ದಿನವಾಗಿದೆ,

ಹೊರತು ಹಬ್ಬದ ದಿನವಾಗಲಿಲ್ಲ.

ಎತ್ತಿನ ಶೃಂಗಾರ ಕಂಗೊಳಿಸುವ ಕಾಲವದು,

ಎತ್ತುಗಳೇ ಮರೆಯಾದ ಮರೀಚಿಕೆಯ
ಬದುಕಿದು.

ಚಂದ್ರನಂತಹ ಕುಂಕುಮವಿತ್ತು, ದೃಷ್ಟಿಗೆಂದು
ಬೊಟ್ಟಿತ್ತು,

ಕುಂಕುಮವೆಲ್ಲಾ ದೃಷ್ಟಿಬೊಟ್ಟಾಗಿ, ದೃಷ್ಟಿಬೊಟ್ಟೇ
ಮಾಯಾವಾದ ಕಾಲವಿದು.

ಹಬ್ಬಗಳೇ ಸಂಬಂಧ ಬೆಸೆಯುವ ಕಾಲವದು,

ದಾಯಾದಿಗಳ ಮೊಗನೋಡದ ನಾಚಿಕೆಯ
ಭಾವವಿಂದು.

ಹಬ್ಬದ ದಿನವೇ ಹೆಚ್ಚು ಸವಿಯುವ ಊಟದ
ಪ್ರತೀತಿಯದು,

ಹಬ್ಬದ ದಿನವೇ ಉಪವಾಸ ಮಾಡುವ
ಸಂಕಲ್ಪವಿಂದು.

ನಭದೆತ್ತರ ಕಾಣುವ ತೆನೆಯ ರಾಶಿ ಅಂದು,

ತೆನೆಗಳೇ ಬೆಳೆಯದ ರೈತರ ಭೂಮಿ ಇಂದು.

ಬೆಳೆದನ್ನು ಹಂಚುವ ಮಾನವೀಯ ಮನ
ಅಂದು,

**– ಸುನೀಲ್ ಅಶೋಕ್ ಗಾಣಿಗೇರ**

**ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿ**

## ಆಕಾರ

ಸದೃಢ ದೇಹಕ್ಕೆ ಬೇಕು ಆಕಾರ,
ಆಕಾರ ಕೊಡುವುದು ಆಹಾರ,
ಆಹಾರದಲ್ಲಿ ಇರಬೇಕು ಉಪ್ಪು–ಖಾರ,
ಉಪ್ಪು–ಖಾರ ಮುಂತಾದ ರುಚಿಯೇ ಕೃಷಿಗೆ ಆಧಾರ,
ಕೃಷಿಯಿಂದ ಆಗಬೇಕು ರೈತರ ಉದ್ಧಾರ,
ಇದರಿಂದ ಮನುಕುಲಕ್ಕೆ ಆಗುವುದು ಉಪಕಾರ,
ನಮ್ಮ ಭೂಮಿಗೆ ಬೇಕಾಗಿರುವುದು ನಿಸರ್ಗ ಮತ್ತು ಬೆಳೆಯ ಉದ್ಧಾರ,
ಭೂಮಿಯ ಉದ್ಧಾರಕ್ಕೆ ನಾವೆಲ್ಲಾ ನೀಡೋಣ ಸಾಕಾರ,
ಇದೇ ನನ್ನ ಸಂದೇಶದ ಆಕಾರ.

– **ಡಾ. ವಿಶ್ವನಾಥ. ಎಸ್.,**
**ಪ್ರಾಧ್ಯಾಪಕರು ಬೇಸಾಯ ಶಾಸ್ತ್ರ ವಿಭಾಗ,**
**ಕೃಷಿ ಮಹಾವಿದ್ಯಾಲಯ, ರಾಯಚೂರು.**

## ನೈತಿಕ ಮೌಲ್ಯ ಇಲ್ಲದಿದ್ದರೆ!

ಎಷ್ಟು ಓದಿ ವಿದ್ಯಾವಂತನಾದರೇನು?
ಒಳ್ಳೆ ಬುದ್ಧಿ ಇಲ್ಲದಿದ್ದರೆ!
ಎಷ್ಟು ಸಿರಿತನ ಇದ್ದರೆ ಏನು?
ಬಂದವರಿಗೆ ತುತ್ತು ಅನ್ನ ನೀಡದೆ ಇದ್ದರೆ!
ಅರಮನೆ ಅಂತ ಮನೆ ಇದ್ದರೆ ಏನು?
ವಾಸ ಮಾಡೋಕೆ ಜನ ಇಲ್ಲದೆ ಇದ್ದರೆ?
ಎಷ್ಟು ದುಡಿದರೆ ಏನು?
ನೆಮ್ಮದಿ ಇಲ್ಲದೆ ಇದ್ದರೆ!
ಅಪ್ಸರೆ ಅಂತ ಸಂಗಾತಿ ಇದ್ದರೆ ಏನು?
ಪ್ರೀತಿ ಇಲ್ಲದೆ ಇದ್ದರೆ!
ಚಿನ್ನದಂತ ಮಕ್ಕಳು ಇದ್ದರೆ ಏನು?
ಹೆತ್ತವರಿಗೆ ಬೆಲೆ ಕೊಡದೆ ಇದ್ದರೆ!
ಎಷ್ಟು ಜನ ಸಂಬಂಧಿಕರು ಇದ್ದರೆ ಏನು?
ನಿನ್ನ ಕಷ್ಟಕ್ಕೆ ಬರದೆ ಇದ್ದರೆ!
ಎಷ್ಟು ಜನ ಗೆಳೆಯರು ಇದ್ದರೆ ಏನು?
ನಿನ್ನ ಅರ್ಥಮಾಡಿಕೊಳ್ಳೊರು ಇಲ್ಲದೆ ಇದ್ದರೆ!
ಎಷ್ಟು ದಿನ ಬದುಕಿದರೆ ಏನು?
ನೀನು ನೀನಾಗಿ ಇಲ್ಲದಿದ್ದರೆ!
ಎಷ್ಟು ಮೆರೆದರೆ ಏನು? ಜನ ಸಂಪಾದಿಸಿದರೆ ಏನು?
ಸತ್ತಾಗ ಹಿಡಿ ಮಣ್ಣು ಹಾಕೋಕೆ ಜನ ಇಲ್ಲದೆ ಇದ್ದರೆ!

– **ರೋಹನ್, ಸ್ನಾತಕೋತ್ತರ ವಿದ್ಯಾರ್ಥಿ**

## ಯವ್ವಾ ಬೇ ನೀ ಯಾಕ್ಹಿಂಗ...?

ಒಂಬತ್ತು ತಿಂಗಳು ಹೊತ್ತು
ಮರುಜೀವ ಪಡೆದು ನನ್ನ ಹೆತ್ತೆ
ಮತ್ತೆ ನೀ ನನ್ನ ಮಗಳಲ್ಲ
ಅಪ್ಪನ ಮಗಳು ಎಂದೆ...
ಯವ್ವಾ ಬೇ ನೀ ಯಾಕ್ಹಿಂಗ.....?

ಹೊತ್ತು-ಹೊತ್ತಿಗೆ ತುತ್ತನಿಟ್ಟು
ಮುದ್ದಿಸಿ ಬೆಳೆಸಿದೆ
ನೀ ಅಪ್ಪನ ಮಗಳು ಎಂದೆ....
ಅಪ್ಪನ ಮೇಲೆ ನನಗರಿಯದೆ
ಪ್ರೀತಿಯ ಸಾಗರವ ನೀ ತುಂಬಿದೆ.
ಯವ್ವಾ ಬೇ ನೀ ಯಾಕ್ಹಿಂಗ...?

ಕ್ಷಣ ಕ್ಷಣವು ನನಗಾಗಿ ಮಿಡಿದೆ
ನೂರಾರು ಕನಸುಗಳನ್ನು ನನ್ನ ಮೇಲೆ ನೀ ಕಂಡೆ
ಮತ್ತೆ ನೀ ನನ್ನ ಮಗಳಲ್ಲ ಎಂದೆ...
ನಿನ್ನ ಪಾಲಿನ ಪ್ರೀತಿಯ ಅಪ್ಪನಿಗೆ ನೀ ಮಿಸಲಿಟ್ಟೆ ನನ್ನ ಈ ಮನಸೊಳಗೆ
ಯವ್ವಾ ಬೇ ನೀ ಯಾಕ್ಹಿಂಗ..?

ಅಪ್ಪನ ಹೆಸರನ್ನು ಉಸಿರುಸಿರಲ್ಲಿ
ನೀ ಬೆರಸಿ ತ್ಯಾಗಕ್ಕೆ ಹೆಸರಾದೆ
ಮತ್ತೆ ನೀ ನನಗೆ ಜೀವ ಇಲ್ಲ ಎಂದೆ...
ಉಸಿರಿಟ್ಟಿದ್ದು ನಾ ಹೆಸರಾದುದ್ದು ನಿಮ್ಮಪ್ಪ ಎಂದೆ
ಯವ್ವಾ ಬೇ ನೀ ಯಾಕ್ಹಿಂಗ...?

– **ಲಕ್ಷ್ಮೀ ಪೂಜಾರಿ**
**ತೃತೀಯ ವರ್ಷದ ಕೃಷಿ ವಿದ್ಯಾರ್ಥಿನಿ**

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

## ಕುರುಕ್ಷೇತ್ರ

ನಡೆಯಿತು ಕುರುಕ್ಷೇತ್ರವೆಂಬ ಘನಘೋರ ಯುದ್ಧ,
ಹರಿಯಿತು ನೆತ್ತರು ಹೊನಲ ಹಾಗೆ,
ಮರುಗಿದಳು ಮಾತೆ ಗಂಗಾದೇವಿಯು ನೋಡಿ,
ಮಲಗಿದ ಸುತ ಭೀಷ್ಮ ಶರಶಯ್ಯೆಯೊಳಗೆ......
ಬಿಡಲಿಲ್ಲ ಪ್ರೇಮವ ಪಾಂಡು ಪುತ್ರರು,
ನಿಂತರು ಕುರುಹಿರಿಯ ಅಧರ್ಮದ ಕಡೆಗೆ......
ಹೊರಟ ರಥವನ್ನೇರಿ ಯುವರಾಜ ಅಭಿಮನ್ಯು,
ಕುಂಭೋದವ ಹೊಸೆದ ಚಕ್ರವ್ಯೂಹದೊಳಗೆ,
ಮರೆತು ಧರ್ಮ ಯುದ್ಧವ ಗುರು ದ್ರೋಣರು,
ಹೊಡೆದು ಬಾಣವ ಚಿರ ಯುವಕನ ಕಡೆಗೆ.....
ಎಳೆದು ಕೊನೆ ಉಸಿರ ಉತ್ತರೆಯ ಕಂತಮಡಿದು,
ನಡೆದ ವೀರ ಸ್ವರ್ಗದ ಕಡೆಗೆ.......
ಹೂತ ರಥದ ಚಕ್ರ ಹೊರ ಬರಲಿಲ್ಲ,
ಕಲಿತ ವಿದ್ಯೆ ಕೈ ಹಿಡಿಯಲಿಲ್ಲ,
ಅರಿತು ಕರ್ಣನ ಗುಟ್ಟನು,
ಹೊರಟಳು ಕುಂತಿಯು ಬೇಡಿದಳು ಅಂಗಲಾಚಿ,
ಉಳಿಸು ಸುತರ ಅಸುವನೆಂದು,
ಮರೆತು ಕೋಪವ, ತ್ವರಿತದಲ್ಲಿ ಇತ್ತು ವಾಗ್ದಾನ.........
ಉಳಿದನು ಇಳೆಯೊಳಗೆ,
ಅಳಿಯದಂತೆ ಅಡಗಿದನು ಸುಯೋಧನ,
ವೈಶಂಪಾಯನದೊಳಗೆ ನಡು ನಡುಗಿ,
ಪಾಂಡವರ ಪರಕ್ರಾಮಗಳಿಗೆ ಉಕ್ಕಿದವು ನೀರು,
ಕೌರವೇಂದ್ರನ ಕಡುಕೋಪಕ್ಕೆ ಮಾಡಿದ ವೃಕೋದರ,
ಭೀಕರ ವಾಕ್ಪಹಾರಕ್ಕೆ ಬಂದನು ದುರ್ಯೋಧನ,
ಬೊಬ್ಬಿರಿಯುತ ಹೊರಗೆ,
ನಡುಗಿತು ಸೌರಮಂಡಲವು ಸುಯೋಧನನ ಆರ್ಭಟಕ್ಕೆ,
ನಡೆಯಿತು ಘೋರ ಯುದ್ಧ ಮದಗಜಗಳ ನಡುವೆ,
ಬಾಯ್ಬಿಚ್ಚಿತು ಭೂಮಿ ಭೀಮನ ಹೊಡೆತಕ್ಕೆ,
ಬೆಚ್ಚಿತು ಬಾನು ಗಧೆಗಳ ಭಾಸಕ್ಕೆ,
ತೋರಿದನು ಕಪಟಿ ಕೃಶ ತೊಡೆಯನ್ನು,
ಹೊಡಿಯೆಂದು ಮಾಡಿದನು ಭೀಮ ಗಧಾಪ್ರಹಾರವನ್ನು,
ಕೂಡಲೆ ನಶಿಸಿ ಸುಯೋಧನನ ಪ್ರಾಣ,
ನಡೆಯಿತು ಯಮನ ಕಡೆಗೆ........

–ಜಯಂತ್ .ಕುಲಕರ್ಣಿ
ಸ್ನಾತಕೋತ್ತರ ವಿದ್ಯಾರ್ಥಿ

# ಲೇಖನಗಳು

# ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

ಪ್ರಕೃತಿಗೂ ಮಾನವನಿಗೂ ಗಾಢ ಸಂಭಂದವಿದೆ. ಅವನು ಪ್ರಕೃತಿಯಲ್ಲಿ ಹುಟ್ಟಿ ಪ್ರಕೃತಿಯಲ್ಲಿ ಬದುಕಿ ಬಾಳುತ್ತಾನೆ. ತನಗೆ ಬೇಕಾದ ಎಲ್ಲವನ್ನು ಪ್ರಕೃತಿಯಿಂದಲೇ ಪಡೆಯುತ್ತಾನೆ. ಆದ್ದರಿಂದಲೇ ಪ್ರಕೃತಿಯನ್ನು ಪ್ರಕೃತಿ ಮಾತೆ ಎಂದು ಕರೆಯುತ್ತಾರೆ. ಆದರೆ ಮಹಾಸ್ವಾರ್ಥಿಯಾದ ಮನುಷ್ಯನಿಂದ ಇಂದು ಗ್ರಾಮ– ನಗರ ಸೇರಿದಂತೆ ಸಂಪೂರ್ಣ ಪರಿಸರ ಮಲಿನವಾಗಿ ಮನುಷ್ಯನ ಸನ್ನಿಹಿತವಾಗಿದೆ. ಆದ್ದರಿಂದ ಪರಿಸರ ಸಂರಕ್ಷಣೆಯನ್ನು ಮಾಡುವಲ್ಲಿ ಭವಿಷ್ಯದ ನಾಗರಿಕರಾದ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ ಎಂದು ಹೇಳಬಹುದು.

ವಿದ್ಯಾರ್ಥಿಗಳು ತಮ್ಮ ಮಹಾವಿದ್ಯಾಲಯ, ಮನೆ ಸೇರಿದಂತೆ ಸುತ್ತಮುತ್ತಲಿನ ಪರಿಸರವು ಮಲಿನವಾಗದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ಶಿಕ್ಷಕರು, ಪೋಷಕರು ಮತ್ತು ಸಮುದಾಯದ ಸಹಾಯ ಪಡೆದುಕೊಂಡು ವಿದ್ಯಾರ್ಥಿ ಸಂಘಗಳ ಮೂಲಕ ಜಾಥಾ ಹೋಗಿ ಜನರಲ್ಲಿ ಪರಿಸರ ಸಂರಕ್ಷಣೆಯ ಅರಿವನ್ನು ಮೂಡಿಸಬೇಕು .ತಮ್ಮ ಮಹಾವಿದ್ಯಾಲಯ ಆವರಣದಲ್ಲಿ ಮಾಲಿನ್ಯ ಉಂಟುಮಾಡುವ ಪ್ಲಾಸ್ಟಿಕ್, ಮಲಿನ ನೀರು ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು. ವಿದ್ಯಾರ್ಥಿಗಳು ಸ್ವತಃ ತಾವೇ ಮಹಾವಿದ್ಯಾಲಯಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರಬಂಧ ಭಾಷಣ ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಪರಿಸರ ಸಂರಕ್ಷಣೆ ಅರಿವು ಮೂಡಿಸಬೇಕು .ವಿದ್ಯಾರ್ಥಿಗಳು ಪರಿಸರ ದಿನಾಚರಣೆ ಎಂದು ತಮ್ಮ ಮನೆ ಗ್ರಾಮ ಮತ್ತು ಮಹಾವಿದ್ಯಾಲಯಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು.

ವಿದ್ಯಾರ್ಥಿಗಳು ತಮ್ಮ ಊರಿನ ರೈತರಿಗೆ ಬೆಳೆಗಳಿಗೆ ರಾಸಾಯನಿಕ ಗೊಬ್ಬರದ ಬದಲಾಗಿ ಸಾವಯವ ಗೊಬ್ಬರ ಬಳಸುವಂತೆ ತಿಳಿಸಬೇಕು, ವಿದ್ಯಾರ್ಥಿಗಳು ತಮ್ಮ ಗುಂಪಿನ ಮೂಲಕ ಮಾರುಕಟ್ಟೆ ಪ್ರದೇಶಗಳಿಗೆ ಹೋಗಿ ಅಲ್ಲಿನ ವ್ಯಾಪಾರಿಗಳಿಗೆ ಆಹಾರ ಬೆಳೆಗಳು ,ಹಣ್ಣು ತರಕಾರಿಗಳಿಗೆ ರಾಸಾಯನಿಕಗಳನ್ನು ಸಿಂಪಡಿಸದಂತೆ ತಿಳಿಹೇಳಬೇಕು.ವಿದ್ಯಾರ್ಥಿಗಳು ತಮ್ಮ ಹತ್ತಿರದ ಪ್ರದೇಶಗಳಲ್ಲಿರುವ ನದಿ, ನಾಲೆ, ಕೆರೆ ಬಾವಿಗಳ ಹತ್ತಿರ ನೈರ್ಮಲ್ಯ ಕಾಪಾಡುವ ಸಂದೇಶಗಳೊನ್ನೊಳಗೊಂಡ ಭಿತ್ತಿಪತ್ರಗಳನ್ನು ಅಂಟಿಸುವ ಮೂಲಕ ಆ ಪ್ರದೇಶಗಳಲ್ಲಿನ ಮಾಲಿನ್ಯವನ್ನು ನಿಯಂತ್ರಿಸುವಂತೆ ಜನರಲ್ಲಿ ಅರಿವನ್ನು ಮೂಡಿಸಬೇಕು,ಅಲ್ಲದೆ ಬೀದಿನಾಟಕಗಳ ಮೂಲಕವೂ ಸಹ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಜಾಗೃತಿಯನ್ನು ಮೂಡಿಸಬಹುದು,

ಪರಿಸರವೇ ಸೃಷ್ಟಿಯ ಪ್ರತಿಯೊಂದು ಆಗರ.ಆದ್ದರಿಂದ ಪರಿಸರವನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕಾದರೆ,ನಾಶವಾಗುತ್ತಿರುವ ಪರಿಸರವನ್ನು ಸಂರಕ್ಷಿಸುವ ಅರಿವನ್ನು ವಿದ್ಯಾರ್ಥಿಗಳಷ್ಟೇ ಅಲ್ಲದೆ ಪ್ರತಿಯೊಬ್ಬ ನಾಗರಿಕನೂ ಮಾಡಬೇಕಾದುದು ಆದ್ಯ ಕರ್ತವ್ಯ ವಾಗಿದೆ.

**"ಪರಿಸರ ಸಂರಕ್ಷಣೆ, ನಮ್ಮೆಲ್ಲರ ಹೊಣೆ"**

**ಶ್ರೀ ರವಿ ಎಮ್. ಸಾಂಬ್ರಾಣಿ**

**ಸಹ ಪ್ರಾಧ್ಯಾಪಕರು**

**ಕೃಷಿ ವಿಸ್ತರಣಾ ವಿಭಾಗ**

**ಕೃಷಿ ಮಹಾವಿದ್ಯಾಲಯ, ರಾಯಚೂರು**

# ಅಮ್ಮ ಕಲಿಸಿದ ಪಾಠ

"ಅಮ್ಮ"ಎಂಬ ಆ ನುಡಿಯು ಎನಿತು ಮಧುರವಮ್ಮ ಜಗದ ಎಲ್ಲಾ ಜೀವರಾಶಿ ಇದನ್ನು ತಿಳಿಯಿತಮ್ಮ . ನನ್ನ ತಾಯಿ ನನಗೆ ಕಲಿಸದ ಪಾಠವೇ ಇಲ್ಲ. ಏನೇನು ಅಂತ ಹೇಳಬೇಕು??ಎಲ್ಲ ಅವಳ ದೇಣಿಗೆನೇ... ಈ ಜೀವ ಅವಳು ಧಾರೆ ಎರೆದಿರೋ ಭಿಕ್ಷೆ...ಈ ಸುಂದರ ಲೋಕ ಲೌಕಿಕದ ಅನುಭವ ಅವಳ ಉಡುಗೊರೆನೇ' ಅಲ್ವಾ?

ನಾನು ಡಾ. ಸುಮ ಟಿ ಸಿ, ಸಹಾಯಕ ಪ್ರಾಧ್ಯಾಪಕಿ, ಬೆಳೆ ಶರೀರ ಕ್ರಿಯಾ ಶಾಸ್ತ್ರ ವಿಭಾಗ , ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ,ರಾಯಚೂರು. ವಿಜಯವಾಣಿ ದಿನಪತ್ರಿಕೆಯನ್ನು ನನ್ನ ತಾಯಿ ತಂದು ನನ್ನ ಮುಂದೆ ಇತ್ತು, ಇದಕ್ಕೇನಾದರು ಬರೀತಿಯಾ ನೋಡು ಅಂತ ಹೇಳಿ, ನನ್ನ ಉತ್ತರಕ್ಕೂ ಕಾಯದೆ, ಒಂದು ಪುಸ್ತಕ ಹಾಗೂ ಲೇಖನಿಯನ್ನು ಕೈಗಿಟ್ಟೆಬಿಟ್ರು. 71 ರ ಈ ಹರೆಯದಲ್ಲೂ ನನ್ನ ತಾಯಿಯ ಉತ್ಸಾಹ ಕೊಂಚವೂ ಕಡಿಮೆ ಆಗಿಲ್ಲ. ಬಹಳ ಭಾರವಾದ ಮನಸ್ಸಿನಿಂದ ಬರೀತಾ ಇದೀನಿ, ಆಕೆ ಈಗ ಒಬ್ಬ ಕ್ಯಾನ್ಸರ್ Patient.... ಹಾಗಂತ ದುಃಖ ಖಂಡಿತ ಇಲ್ಲ....ಗುಣಮುಖರಾಗ್ತಾರೆ ಅನ್ನೋ ಬಲವಾದ ನಂಬಿಕೆಯಿಂದ ಜೀವನ ನಡೆಸ್ತಿದಿನಿ...ಹಾಗೆ ಅವರ Will power ಗೆ ಒಂದು ದೊಡ್ಡ ಸಲಾಮು... ನಮ್ಮ ತಂದೆ ತಾಯಿದು ಪ್ರೇಮವಿವಾಹ...ಎದುರು ಬದಿರು ಮನೆ ಇವರಿಬ್ಬರದು... ತಂದೆಗೆ ಒಂದು ಕಣ್ಣಿಲ್ಲ....ಆದ್ರೂ ನನ್ನ ತಾಯಿ ಅವರನ್ನ 1970 ರಲ್ಲಿ ವಿವಾಹವಾಗಿ ತ್ಯಾಗದ ಉತ್ತುಂಗ ಏರಿದರು....ಇಲ್ಲಿ ಅವರಿಂದ ಕಲಿತದ್ದು, "ಪ್ರೀತಿನೇ ಎಲ್ಲ...ನಂಬಿಕೆಯೇ ದೇವರು" ಅನ್ನೋದು. ಅರ್ಧ ಶತಮಾನದ ಅನ್ಯೋನ್ಯ ದಾಂಪತ್ಯ ಅವರದು... ಆಗಸ್ಟ್ 10, 2020, ತಂದೆ ವಿಧಿವಶರಾದ್ರು... ಎಲ್ಲರಂತೆ ನನ್ನ ತಾಯಿನು ಮಾಮೂಲಾಗಿ ಓದಿನಲ್ಲಿ, ಮನೆಕೆಲಸಗಳಲ್ಲಿ ನನ್ನನ್ನು ತಿದ್ದಿ, ಬುದ್ದಿ ಹೇಳ್ತಾ ಬಂದ್ರು...ಮಾತಾಡದೇ ಅವರು ಕಲಿಸಿದ್ದು ಒತ್ತಡದ ಪರಿಸ್ಥಿತಿಯಲ್ಲಿ ಎದೆಗುಂದದೆ ಇರೋದು. ನಮ್ಮಮ್ಮ ತುಂಬಾ strong in her mind. ಅವ್ರು ಕ್ಲಿಷ್ಟ ಪರಿಸ್ಥಿತಿಗಳನ್ನು ಬಹಳ ಅಚ್ಚುಕಟ್ಟಾಗಿ ವಿಶ್ಲೇಷಿಸಿ, ನಿರ್ಧಾರ ತೊಗೋಳ್ತಿದ್ರು. ಇದು ನಾನು ಅವರಿಂದ ಕಲಿತ ಮತ್ತೊಂದು ಜೀವನಕ್ಕೆ ಅಗತ್ಯವಾದ ಪಾಠ. ಅವರ ಪ್ರಿಯವಾದ ಸಾಲುಗಳೆಂದರೆ "ನಾವು ಹಿಂದಿನದ್ದನ್ನು ಮರೀಬಾರ್ದು" ಅನ್ನೋದು...ತಂದೆ ತಂದುಕೊಟ್ಟ ಸಂಬಳವನ್ನು ಹುಷಾರಾಗಿ ಕೂಡಿಟ್ಟು ನನ್ನನ್ನು doctorate ಓದಿಸಿ, ನನ್ನ ಮಗಳನ್ನು 15 ವರ್ಷಗಳು ಜೋಪಾನವಾಗಿ ಪೋಷಿಸಿ, ಸಮಾಜದಲ್ಲಿ ನನಗೆ ಒಂದು ಉತ್ತಮ ಸ್ಥಾನ ತಂದುಕೊಟ್ಟು, ನೂರಾರು ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನ ನೀಡೋ ಹಾಗೆ ಮಾಡಿದ ನನ್ನಮ್ಮನ ಬಗ್ಗೆ ಎಷ್ಟು ಬರೆದರೂ ಕಡಿಮೆನೇ....ಅವಳೇ ಒಂದು ದೊಡ್ಡ ಪಾಠ.....

– ಡಾ. ಸುಮಾ. ಟಿ.ಸಿ.

ಸಹ ಪ್ರಾಧ್ಯಾಪಕರು

ಬೆಳೆ ಶರೀರ ಮತ್ತು ಕ್ರಿಯಾ ಶಾಸ್ತ್ರ ವಿಭಾಗ

ಕೃಷಿ ಮಹಾವಿದ್ಯಾಲಯ, ರಾಯಚೂರು

# ಯುವಕರು ಮತ್ತು ಕೃತಕ ಬುದ್ಧಿಮತ್ತೆ (AI) – ಭವಿಷ್ಯದ ಜಾಣಮತಿ!

ಈಗಿನ ತಲೆಮಾರಿನ ಯುವಕರು "Hey Siri", "OK Google", "ChatGPT" ಬಳಸಿ ತಮ್ಮ ದೈನಂದಿನ ಜೀವನವನ್ನು ಸುಲಭಗೊಳಿಸುತ್ತಿದ್ದಾರೆ. AI (Artificial Intelligence - ಕೃತಕ ಬುದ್ಧಿಮತ್ತೆ) ಎಂದರೆ ಮಾನವನ ಬುದ್ಧಿಯನ್ನು ಅನುಕರಿಸುವ ತಂತ್ರಜ್ಞಾನ. AI ಯು ದೈನಂದಿನ ಜೀವನ, ಉದ್ಯೋಗ, ಕೃಷಿ, ವೈದ್ಯಕೀಯ, ಶಿಕ್ಷಣ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ.

ನೂತನ ತಂತ್ರಜ್ಞಾನಗಳ ಬೆನ್ನುಹತ್ತಿರುವ ಈ ಪೀಳಿಗೆ AI ಯನ್ನು ಕೇವಲ ಉಪಯೋಗಿಸುತ್ತಿಲ್ಲ, ಅದನ್ನು ಅಭಿವೃದ್ಧಿಪಡಿಸುವ, ಆವಿಷ್ಕಾರ ಮಾಡುವತ್ತ ಕೂಡಾ ತಿರುಗುತ್ತಿದೆ. AI ನ ಭವಿಷ್ಯ ಯುವಕರ ಕೈಯಲ್ಲಿದೆ!

ಯುವಕರು ಏಕೆ AI ಯತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ?

ಯುವಕರು AI ಯತ್ತ ಹೆಚ್ಚು ಆಕರ್ಷಿತರಾಗುತ್ತಿರುವ ಪ್ರಮುಖ ಕಾರಣವೆಂದರೆ ಇದುAutomation, ಹೊಸ ಉದ್ಯೋಗಾವಕಾಶಗಳು, ಸೃಜನಶೀಲತೆಗೆ ಹೊಸ ಆಯಾಮ, Startups ಸ್ಥಾಪನೆ ಮತ್ತು ದೈನಂದಿನ ಜೀವನ ಸುಲಭಗೊಳಿಸುವುದಾಗಿದೆ.

☑ Automation: AI ಉದ್ಯಮ, ವಾಣಿಜ್ಯ, Call Centers, Self-Driving Cars ಮುಂತಾದ ಕ್ಷೇತ್ರಗಳಲ್ಲಿ ಶ್ರಮ ಕಡಿಮೆ ಮಾಡುತ್ತಿದೆ ಮತ್ತು ವೇಗ ಹೆಚ್ಚಿಸುತ್ತಿದೆ.

☑ Customer Service & Digital Marketing: AI-ಚಾಲಿತ Chatbots, Voice Assistants (Siri, Alexa) ಗ್ರಾಹಕರ ಸೇವೆಯನ್ನು ಸುಗಮಗೊಳಿಸುತ್ತವೆ. AI ಬಳಸಿ ಗುರಿ ಗ್ರಾಹಕರಿಗೆ ಕಸ್ಟಮ್ ಮಾರ್ಕೆಟಿಂಗ್ ಮಾಡಬಹುದು.

☑ ಹೊಸ ಉದ್ಯೋಗಾವಕಾಶಗಳು: Data Science, Machine Learning, Robotics, AI Ethics ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗದ ಅವಕಾಶಗಳು ಹೆಚ್ಚುತ್ತಿವೆ.

☑ ಸೃಜನಶೀಲತೆ: AI ಬಳಸಿ Digital Art (DALL·E), ಕಥೆ-ಕವನ ಬರೆಯುವುದು (ChatGPT), ಸಂಗೀತ ಸಂಯೋಜನೆ (AIVA) ಮತ್ತು ವೀಡಿಯೋ ಎಡಿಟಿಂಗ್ ಮಾಡಬಹುದು.

☑ AI Startups: Healthcare (Qure.ai), EdTech (BYJU's), Agri-Tech (CropIn), FinTech (Zerodha) ಮುಂತಾದ Startups ಯಶಸ್ಸನ್ನು ಸಾಧಿಸುತ್ತಿವೆ.

☑ ದೈನಂದಿನ ಜೀವನ: AI Weather Prediction, Stock Market Analysis, Healthcare Monitoring (Fitbit), Smart Homes (Alexa, Google Nest) ಮೂಲಕ ಅನುಕೂಲತೆ ಒದಗಿಸುತ್ತಿದೆ.

AI ಯ ಬಳಕೆ – ಯುವಕರ ನೆಚ್ಚಿನ ಕ್ಷೇತ್ರಗಳು!

ಈಗಿನ ತಲೆಮಾರಿನ ಯುವಕರು AI ಮೂಲಕ ತಮ್ಮ ಕ್ರಿಯಾಶೀಲತೆಯನ್ನು ವಿಸ್ತರಿಸುತ್ತಿದ್ದಾರೆ. AI ಹಲವಾರು ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಇದರಿಂದ ಉದ್ಯೋಗಗಳು, ನವೀಕರಣಗಳು ಮತ್ತು ಹೊಸ ಅವಕಾಶಗಳು ಉಂಟಾಗುತ್ತಿವೆ.

◇ Coding & Automation – AI ಬಳಸಿ Software Development ಹೆಚ್ಚು ಪರಿಣಾಮಕಾರಿ. GitHub Copilot, Tabnine ಮುಂತಾದ AI Code Assistants, Selenium, UiPath Automation Frameworks ಸಹಾಯ ಮಾಡುತ್ತವೆ. AI-Driven App Development ಮತ್ತು No-Code Platforms (Bubble, Zapier) ಜನಪ್ರಿಯವಾಗಿವೆ.

🎮 Gaming & Virtual Reality – AI Non-Playable Characters (NPCs) ಹೆಚ್ಚು ಬುದ್ಧಿವಂತಗೊಳಿಸುತ್ತಿದೆ. AI procedural content generation (Minecraft AI), VR/AR Gaming (Oculus Rift, HoloLens), AI-Based Game Testing ಮುಂತಾದವುಗಳು ಗೇಮಿಂಗ್ ಕ್ಷೇತ್ರವನ್ನು ವಿಸ್ತರಿಸುತ್ತಿವೆ.

🎨 Content Creation – AI ಆಧಾರಿತ Article Writing (ChatGPT, Jasper AI), Video Editing (Runway ML, Adobe Sensei), Digital Art (DALL·E, Deep Dream), AI-Generated Music (AIVA, Jukebox) ಮೂಲಕ ಸೃಜನಶೀಲತೆಯ ಹೊಸ ಆಯಾಮ ಸೃಷ್ಟಿಯಾಗಿದೆ.

🩺 Healthcare & Diagnosis – AI MRI, CT Scan, X-Ray ಡೇಟಾ ವಿಶ್ಲೇಷಿಸಿ ರೋಗ ಪತ್ತೆ ಮಾಡಬಹುದು (IBM Watson Health). Robotic Surgery (Da Vinci Robot), AI Wearables (Fitbit) ಮತ್ತು AI Pharma (AlphaFold) ವೈದ್ಯಕೀಯ ಕ್ಷೇತ್ರವನ್ನು ಬದಲಾಯಿಸುತ್ತಿವೆ.

🚜 Agri-Tech & Smart Farming – AI Drones ಬೆಳೆಗಳ ಆರೋಗ್ಯ ಪರಿಶೀಲನೆ, Soil Analysis (CropIn), Smart Irrigation, AI-Based Pest Control ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುತ್ತಿವೆ.

🔐 Cybersecurity & Ethical Hacking – AI-Powered Threat Detection, Automated Ethical Hacking, AI-Based Fraud Detection (PayPal AI Security) ಇತರ ಡಿಜಿಟಲ್ ಅಪಾಯಗಳನ್ನು ತಡೆಗಟ್ಟುತ್ತಿದೆ.

## AI ಬಳಕೆ – ಲಾಭ ಹಾಗೂ ಪೈಪೋಟಿ!

### ☑ **ಲಾಭಗಳು :**

✔ ಅಧಿಕ ವೇಗ: ಕಾರ್ಯಕ್ಷಮತೆ ಹೆಚ್ಚಿಸುತ್ತದೆ.
✔ ನಿಖರವಾದ ನಿರ್ಧಾರ: ದೋಷಗಳ ಪ್ರಮಾಣ ಕಡಿಮೆ.
✔ ಸ್ವಯಂ-ಚಾಲಿತ ವ್ಯವಸ್ಥೆಗಳು: AI ಸಹಾಯದಿಂದ ಕಾರುಗಳು, ಕಾರ್ಖಾನೆಗಳು, ಆಸ್ಪತ್ರೆಗಳು, ಬ್ಯಾಂಕುಗಳು ಹೆಚ್ಚು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತವೆ.
✔ ಹೊಸ ಉದ್ಯೋಗ ಸೃಷ್ಟಿ: Data Science, AI Engineering, Machine Learning ಮುಂತಾದ ಹೊಸ ಉದ್ಯೋಗಗಳು ಉದ್ಭವಿಸುತ್ತಿವೆ.

### ❌ ಹಾನಿಗಳು:

❌ ಉದ್ಯೋಗ ಕಳವು? – Automation ಜಾಸ್ತಿಯಾದರೆ, ಕೆಲವು ದೈನಂದಿನ ಉದ್ಯೋಗಗಳು ಅಪಾಯಕ್ಕೀಡಾಗಬಹುದು.

❌ ಗೌಪ್ಯತೆ (Privacy) ಅಪಾಯ: AI ನಲ್ಲಿ ಸಂಗ್ರಹವಾಗುವ ಮಾಹಿತಿಯ ಸುರಕ್ಷತೆ ದೊಡ್ಡ ಪ್ರಶ್ನೆ.

❌ ನಮಗೆ ಬುದ್ಧಿ ಬೇಕಾ, AI ಸಾಕಾ? – ತಂತ್ರಜ್ಞಾನ ಜಾಸ್ತಿಯಾದರೆ, ಮನುಷ್ಯನ ಸ್ವತಂತ್ರ ಯೋಚನೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಕುಗ್ಗಬಹುದು.

ಯುವಕರಿಗೆ AI ಕಲಿಯಲು ಸುಲಭ ಮಾರ್ಗಗಳು!

AI ಮತ್ತು Machine Learning ಕಲಿಯಲು ಅನೇಕ ಮಾರ್ಗಗಳಿದ್ದು, ಸರಿಯಾದ ಪಥ ಅನುಸರಿಸಿದರೆ ಇದು ಸುಲಭಗೊಳ್ಳಬಹುದು.

◇ ಆನ್‌ಲೈನ್ ಕೋರ್ಸುಗಳು – Coursera (Andrew Ng Machine Learning), Udemy (AI & Data Science), edX (MIT, Harvard), Khan Academy, YouTube (freeCodeCamp, Simplilearn), Google AI Hub ಮುಂತಾದ ಉಚಿತ ಮತ್ತು ಪೇಡ್ ಕೋರ್ಸ್‌ಗಳು.

◇ ಪ್ರೋಗ್ರಾಮಿಂಗ್ ಭಾಷೆಗಳು – Python (TensorFlow, PyTorch), R (Data Science), Java (AI Apps), C++ (High-Performance Models), SQL (Data Management). ಪ್ರಾರಂಭಿಸಲು Python ಸೂಕ್ತ.

◇ AI ಪ್ರಾಜೆಕ್ಟ್‌ಗಳು – Face Recognition (OpenCV), Chatbot (NLP), Spam Email Detection, Stock Prediction, AI Voice Assistant, Image Classifier ಮುಂತಾದ ಪ್ರಾಜೆಕ್ಟ್‌ಗಳನ್ನು ಮಾಡಿ, GitHub ನಲ್ಲಿ ಅಪ್‌ಲೋಡ್ ಮಾಡಿ.

◇ ಇಂಟರ್ನ್‌ಶಿಪ್ & ಸಂಶೋಧನೆ – Google, Microsoft, Tesla ಮುಂತಾದ ಕಂಪನಿಗಳಲ್ಲಿ Internship, Kaggle, Hackerearth ಸ್ಪರ್ಧೆಗಳಲ್ಲಿ ಭಾಗವಹಿಸಿ.

◇ AI Community & Networking – GitHub (Open-Source), Stack Overflow (Doubts), Kaggle (AI Contests), Reddit & Discord AI Groups, LinkedIn AI Networks ಮೂಲಕ ಸಂಪರ್ಕ ಬೆಳೆಸಿಕೊಳ್ಳಿ.

ಟಿಪ್ – ಉಚಿತ ಸಂಪನ್ಮೂಲಗಳಿಂದ ಪ್ರಾರಂಭಿಸಿ, ಪ್ರಾಯೋಗಿಕವಾಗಿ ಕಲಿಯಿರಿ, ಮತ್ತು AI Community ಯೊಂದಿಗೆ ಬೆಸೆದುಕೊಳ್ಳಿ!

ಭವಿಷ್ಯದಲ್ಲಿ AI + ಯುವಕರು!

AI ನಮ್ಮ ಸಹಾಯಕ್ಕೆ ಬೇಕಾದರೂ, ನಮ್ಮ ಪರವಾಗಿ ಯೋಚಿಸುವಂತಾಗಬಾರದು!

"Automation OK, ಆದರೆ AI ನಮ್ಮ ಯೋಚನೆ ಹತ್ತಿರ ಬರಬಾರದು!"

☑ AI ಬರವಣಿಗೆ, ಡೇಟಾ ವಿಶ್ಲೇಷಣೆ, ಕಲೆಯಲ್ಲಿ ಬೆಂಬಲ ನೀಡಬಹುದು.

❌ ಆದರೆ, ನಮ್ಮ ಸೃಜನಶೀಲತೆ ಮತ್ತು ತೀರ್ಮಾನ ಶಕ್ತಿಯನ್ನು ಪ್ರಭಾವಿತ ಮಾಡಬಾರದು.

"AI ಸಹಾಯ ಮಾಡಲಿ, ನಿರ್ಧಾರ ತೆಗೆದುಕೊಳ್ಳಬಾರದು!"

☑ AI ಸಲಹೆ ನೀಡಬಹುದು – ವೈದ್ಯಕೀಯ ಕ್ಷೇತ್ರದಲ್ಲಿ ರೋಗ ಪತ್ತೆ ಮಾಡಲು.

❌ ಆದರೆ, ನೀವು ಯಾವ ಉದ್ಯೋಗ ಅಥವಾ ಕಾಲೇಜು ಆಯ್ಕೆ ಮಾಡಬೇಕು ಎಂಬುದನ್ನು ನಿಯಂತ್ರಿಸಬಾರದು.

"AI ನಮ್ಮ ಕೆಲಸ ಕಿತ್ತುಕೊಳ್ಳುವುದಿಲ್ಲ, ಹೊಸ ಅವಕಾಶಗಳನ್ನು ಕೊಡುತ್ತದೆ!"

✔ Data Scientist, AI Engineer ಮುಂತಾದ ಉದ್ಯೋಗಗಳು ಹುಟ್ಟಿಕೊಂಡಿವೆ.

✔ AI-based Smart Farming, Gaming, Digital Art ನಲ್ಲಿ ಹೊಸ ಅವಕಾಶಗಳು ಲಭ್ಯ.

ಯುವಕರು AI ಕಲಿಯಿರಿ, ಅದನ್ನು ಸಾಧನವಾಗಿ ಬಳಸಿ, ಆದರೆ ನಿರ್ಧಾರ ತೆಗೆದುಕೊಳ್ಳುವ ಹಕ್ಕು ನಿಮ್ಮದಾಗಿರಲಿ!

## ಉಪಸಂಹಾರ

AI ನಮ್ಮ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಕ್ರಾಂತಿಯನ್ನು ತರುತ್ತಿದೆ, ಆದರೆ ನಾವು ಅದನ್ನು ನಿಯಂತ್ರಿಸಬೇಕೇ ಹೊರತು, ಅದಕ್ಕೆ ಅಧೀನರಾಗಬಾರದು! ತಂತ್ರಜ್ಞಾನ ಎಷ್ಟೇ ಪ್ರಗತಿ ಹೊಂದಿದರೂ, ಮಾನವನ ಸೃಜನಶೀಲತೆ, ಯೋಚನೆ ಮತ್ತು ತೀರ್ಮಾನ ಶಕ್ತಿ ಅಮೂಲ್ಯವಾಗಿದೆ. AI ನಮಗೆ ಸಹಾಯ ಮಾಡಲು, ನಮ್ಮ ಕೌಶಲ್ಯವನ್ನು ಉತ್ತೇಜಿಸಲು ಇರಬೇಕು, ಆದರೆ ನಮ್ಮ ಭಾವನೆಗಳು ಮತ್ತು ಮೌಲ್ಯಗಳನ್ನು ಪರಿವರ್ತಿಸಲು ಬೇಡ!

ಯುವಕರು AI ಕಲಿತು, ಅದರ ತಂತ್ರಜ್ಞಾನವನ್ನು ಸರಿಯಾಗಿ ಉಪಯೋಗಿಸಿ, ಹೊಸ ಸಂಶೋಧನೆ, ಉದ್ಯೋಗ ಮತ್ತು ಹೊಸ ಆವಿಷ್ಕಾರಗಳನ್ನು ಮಾಡಿದರೆ, ಭವಿಷ್ಯ Digital Wonder ಆಗುವುದು ಖಚಿತ! AI ಅನ್ನು ಆತ್ಮಸ್ಥೈರ್ಯದಿಂದ, ಜ್ಞಾನದಿಂದ ಬಳಸಿದರೆ, ನಾವು ಉನ್ನತಿಗೇರಬಹುದಾದ ಹೊಸ ಯುಗವನ್ನು ನಿರ್ಮಿಸಬಹುದು!

**ಶ್ರೀಮತಿ ಮಲ್ಲಿಕಾ ಮೇಟಿ**

**ಸಹಾಯಕ ಪ್ರಾಧ್ಯಾಪಕರು,**

**ಕೃಷಿ ವಿಸ್ತರಣಾ ಶಿಕ್ಷಣ ವಿಭಾಗ**

**ಕೃಷಿ ಮಹಾವಿದ್ಯಾಲಯ, ರಾಯಚೂರು**

# ಸ್ವಾಮಿ ವಿವೇಕಾನಂದರ ಕುರಿತು ಪ್ರಬಂಧ

ಸ್ವಾಮಿ ವಿವೇಕಾನಂದ ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು. ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾದ ಅವರು ಪರಿಗಣಿತರಾಗಿದ್ದಾರೆ.

ಸ್ವಾಮಿ ವಿವೇಕಾನಂದರ ನಿಜವಾದ ಹೆಸರು ನರೇಂದ್ರನಾಥ ದತ್ತ. 12 ಜನವರಿ 1863ರಂದು ಕೋಲ್ಕತ್ತಾದಲ್ಲಿ ವಿವೇಕಾನಂದರು ಜನಿಸಿದರು. ಅವರ ತಾಯಿ ಭುವನೇಶ್ವರಿ ದೇವಿ ಮತ್ತು ತಂದೆ ವಿಶ್ವನಾಥ ದತ್ತ. ಅವರ ಗುರುಗಳು ರಾಮಕೃಷ್ಣರು ಹಾಗೂ ಸಹೋದರ ಭೂಪೇಂದ್ರನಾಥ ದತ್ತ. ಬಾಲ್ಯದಿಂದಲೂ ಪ್ರತಿಭಾವಂತರರಾದ ನರೇಂದ್ರ ಸಂಗೀತ, ಜಿಮ್ನಾಸ್ಟಿಕ್‌ನಲ್ಲಿ ಉತ್ತಮ ಸಾಧನೆ ಮಾಡಿದರು.

ವಿವೇಕಾನಂದರು 1893ರಲ್ಲಿ ಅಮೇರಿಕಾದ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣ ಸ್ಮರಿಸುವಂತದ್ದು. ಭಾಷಣ ಮಾಡುವಾಗ "ಅಮೇರಿಕಾದ ಸಹೋದರ, ಸಹೋದರಿಯರೇ" ಎಂದು ಸಭೀಕರನ್ನು ಉದ್ದೇಶಿಸಿ ಮಾತನಾಡಿದರು. ಅವರ ಸಂದೇಶಗಳು ಅನೇಕರ ಜೀವನಕ್ಕೆ ಸ್ಪೂರ್ತಿ ನೀಡುತ್ತವೆ. "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬುದು ಅವರ ಸಂದೇಶಗಳಲ್ಲಿ ಒಂದಾಗಿದೆ ಮತ್ತು ಮುಂದಾಗಿದೆ.

ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ಪ್ರತಿ ವರ್ಷ "ಯುವದಿನ" ವೆಂದು ಆಚರಿಸಲಾಗುತ್ತದೆ. ಅವರ 39ನೇ ವಯಸ್ಸಿನಲ್ಲಿ 4 ಜುಲೈ 1902ರಲ್ಲಿ ಧ್ಯಾನ ಮಾಡುವಾಗ ದೈವಾಧೀನರಾದರೆಂದು ಹೇಳಲಾಗುತ್ತದೆ.

ನಮ್ಮ ರಾಷ್ಟಕವಿ ಕುವೆಂಪು ಅವರು ಸ್ವಾಮಿ ವಿವೇಕಾನಂದರನ್ನು ಕುರಿತು ಒಂದು ಕೃತಿ ರಚಿಸಿದ್ದಾರೆ ಹಾಗೂ ಬೇಲೂರಿನ ರಾಮಕೃಷ್ಣ ಮಠಕ್ಕೆ ಭೇಟಿ ನೀಡುತ್ತಿದ್ದರು. ದೇಶ ವಿದೇಶಗಳಲ್ಲಿ ಹಿಂದೂ ಧರ್ಮದ ತತ್ವವನ್ನು ಬೋಧಿಸಿದರು. ಅವರು ಮುಂದಿನ ಯುವ ಪೀಳಿಗೆಗೆ ಆದರ್ಶ ವ್ಯಕ್ತಿಯಾಗಿದ್ದಾರೆ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

**ಕಾವ್ಯ. ಎನ್.ಎಚ್**

**ಪ್ರಥಮ ವರ್ಷದ ಕೃಷಿ ವಿದ್ಯಾರ್ಥಿನಿ**

# ಭಾರತ ಬೆಳೆಯುತ್ತಿಲ್ಲ, ಬಳಲುತ್ತಿದೆ

ಕೊಳಕಾದ ವ್ಯವಸ್ಥೆಗಳು, ದೇಶವನ್ನಾಳುವ ಕೊಳೆತ ಮನಸ್ಸುಗಳು, ಪುಸ್ತಕಕಷ್ಟೇ...ಸೀಮಿತವಾದ ಕಾನೂನು ಇವೆಲ್ಲವೂ ಭವ್ಯ ಭಾರತಕ್ಕೆ ಸಿಕ್ಕ ಮೂಲ ಕೊಡುಗೆಗಳು, ವಾಸ್ತವವನ್ನೆ ಮರೆಸಿ ಆಶ್ವಾಸನೆಗಳ ವಾಸನೆ ಮೂಗಿಗೆ ಸವರಿ ತಮ್ಮ ಬೇಳೆ ಬೇಯಿಸಿಕೊಳ್ಳುವುದರಲ್ಲೇ... ಹಲವಾರು ರಾಜಕಾರಣಿಗಳು ಇನ್ನೂ ಜೀವಾಂತವಾಗಿದ್ದಾರೆ. ಇದು ಅವರದ್ದೊಂದೆ ತಪ್ಪಲ್ಲ ಹಾಗಂತ ವೋಟು ಹಾಕಿದ ಜನ ಸಾಮಾನ್ಯರದು ತಪ್ಪೂ ಅಂತ ನಾನು ಹೇಳಲ್ಲ. ಇದು ವ್ಯವಸ್ಥಿತವಾಗಿ ಸುಸ್ಥಿರ ಸಮಾಜ ಕಟ್ಟಲು ನಮ್ಮ ಹಿರಿಯರು ಹಾಕದ ಬುನಾದಿಯ ಪ್ರಭಾವ.

ಹೀಗೆ ನನ್ನ ಹೆಜ್ಜೆ ಗಣಿನಾಡು ಬಳ್ಳಾರಿ ಕಡೆಗೆ ಸಾಗಿತ್ತು, ಪಯಣ ಶುರುವಾಗಿದ್ದು ಬೆಂಗಳೂರು – ಬಳ್ಳಾರಿಯ " ಹಂಪಿ ಎಕ್ಸ್ಪ್ರೆಸ್ " ಆದರೆ ಅದರ ಸಮಸ್ಯೆಗಳು ಕೌಂಟ್ಲೆಸ್, ಅದೇ ಮೇಲೆ ಹೇಳಿದೆನಲ್ಲ ಹೆಸರಿಗೆ ತಕ್ಕಂತ ಸೌಲಭ್ಯವೊದಗಿಸುವ ಗೋಜಿಗೇ ಹೋಗುವುದಿಲ್ಲ ಈ ಭವ್ಯ ಭಾರತ ಜನರ ಸಂಪರ್ಕ ಜೀವನಾಡಿ ನಮ್ಮ ರೈಲ್ವೇ ಸಾರಿಗೆ. ಮಿತಿಮೀರಿದ ಆದಾಯ ಗಳಿಸುವ ಹುಚ್ಚು, ದುಸ್ಥಿತಿಗೆ ಜಾರಿದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿತ್ತು ಈ ದೃಶ್ಯ. ಒಂದು ರೈಲಿಗೆ ಎಷ್ಟು ಪ್ರಯಾಣಿಕರಿಗೆ ಆಸನಗಳ ವ್ಯವಸ್ಥೆ ಇದೆಯೋ ಅಷ್ಟು ಟಿಕೆಟ್ ಗಳನ್ನು ನೀಡಬೇಕು, ವ್ಯವಸ್ತೆಯ ಮಾತಂತೂ ಬಿಡಿ ಇದು ಪ್ರತಿಷ್ಠೆಯ ವಿಷಯವಾಗಿ ಮಾರ್ಪಾಡಾಗಿರುವುದು ಜನ ಸಾಮಾನ್ಯರಿಗೆ ದುಃಖಕರ ಸಂಗತಿ. ರಾಜ್ಯಕ್ಕೆ ಯಾರೋ ಕೇಂದ್ರ ಮಂತ್ರಿ ಬಂದಿದ್ದಾರೆಂದು ಏನೂ ಗೊಂದಲಗಳು ಆಗದಂತೆ ನೋಡಿಕೊಳ್ಳಬೇಕೆಂದು ರಾಜ್ಯ ಸರ್ಕಾರ ಮುತುವರ್ಜಿವಹಿಸಿದೆಯಂತೆ, ಅದಕ್ಕಾಗಿ ನೂರಾರು ಜನರನ್ನು ಒಂದೇ ಭೋಗಿಗೆ ತುರುಕಿದರಂತೆ.ಅದೂ ಒಂದು ಸಮಸ್ಯೆಯೇ ಅಂತ ಗೊತ್ತಾಗಲೇ ಇಲ್ಲವೇನೋ ಆ ಮೂಢರಿಗೆ. ಅವರಿಗೆ ನಿಜವಾಗಲೂ ಜನರ ಬಗ್ಗೆ ಕಾಳಜಿ ಇದ್ದಿದ್ದರೆ ಈ ಸಮಸ್ಯೆಗೆ ಸಾಕಷ್ಟು ಪರಿಹಾರಗಳು ಹುಡುಕಬಹುದಿತ್ತು. ಅವರ ಪ್ರತಿಷ್ಠೆಯ ಮುಂದೆ ಬಡಜನರ ಬವಣೆಗಳು ಅಂತಹ ಕೊಳಕು ಮನಸುಗಳಿಗೆ ಎಲ್ಲಿ ಅರಿವಾಗಬೇಕು. ನಿಂತುಕೊಳ್ಳಲು ಜಾಗವಿಲ್ಲದೆ ಕೊನೆಗೆ ಶೌಚಾಲಯದ ಬಾಗಿಲುಗಳು ತೆಗೆಯಲಿಕ್ಕು ಆಗದಂತಹ ಸ್ಥಿತಿ ತಲುಪಿತ್ತು , ಅದರಲ್ಲೂ ಬೆಳಗ್ಗೆಯಿಂದ ಸಂಜೆಯವರೆಗೆ ದುಡಿದು ಊರಿಗೆ ಹೊರಟ ಪ್ರಯಾಣಿಕರ ಗೋಳು ಹೇಳತೀರದು, ಸತತವಾಗಿ 7–8 ತಾಸು ನಿಂತುಕೊಂಡೆ ಪ್ರಯಾಣಿಸಬೇಕೆಂದರೆ ಹೇಗೆ ಸಾಧ್ಯ, ಅದರಲ್ಲೂ ಅದು ರಾತ್ರಿಯ ಸಮಯ. ನಿದ್ರೆಯ ಮಾತಂತೂ ಬಿಡಿ ಅದು ದೂರದ ಮಾತು. ಇಷ್ಟೆಲ್ಲಾ ನೋಡಿದರೂ ಈ ಆಡಳಿತಗಾರರಲ್ಲಿ ಸ್ವಲ್ಪವಾದರೂ ಮಾನವೀಯತೆ ಉಳಿದಿದೆ ಎಂದರೆ ಅದು ಹಾಸ್ಯಾಸ್ಪದ ಅಲ್ಲದೆ ಮತ್ತಿನ್ನೇನು. ಅವರಿಗೆನಾಗಬೇಕು ಅವರ ಮಕ್ಕಳು ಮತ್ತು ಕುಟುಂಬಕ್ಕೆ ಸರ್ಕಾರ ಐಷಾರಾಮಿ ಕಾರುಗಳನ್ನು ಒದಗಿಸಿರುವಾಗ ನಿರ್ಗತಿಕ ಕೂಲಿ ಕಾರ್ಮಿಕರಿಗೆ ಏನಾದರೆನಂತೆ.

ಹಲವಾರು ಕನಸುಗಳ ಭಾರ ಹೊತ್ತು ಬೆಂಗಳೂರಿನಂತಹ ಮಹಾನಗರಗಳಿಗೆ ಬರುವ ಜನತೆ, ಹೋಗುವಾಗ ಅವರ ಆರ್ಥಿಕ ಸ್ಥಿತಿಯಲ್ಲಿ ಎಳ್ಳಷ್ಟೂ ಬದಲಾಗದೆ ಅದೇ ಭಾರ ಹೊತ್ತು ತಮ್ಮ ತವರುಗಳಿಗೆ ಮರಳುತ್ತಿರುವುದು ವಿಷಾದನೀಯ. ಯಾಕಂದರೆ ನಮ್ಮ ವ್ಯವಸ್ಥೆಯೇ ಹಾಗಲ್ಲವೆ ಉಳ್ಳವರು, ವಲಸೆ ಬಂದವರ ಹತ್ತಿರ ಸಾಕಾಗುವಷ್ಟು ದುಡಿಸಿಕೊಂಡು ಸರಿಯಾಗಿ ಕೂಲಿಗಳನ್ನು ಕೊಡದೆ ದಬ್ಬಾಳಿಕೆಯಿಂದ ಖಾಲಿ ಜೇಬಿನಲ್ಲಿ ವಾಪಾಸಾಗುವುದಕ್ಕೆ ಕಾರಣವಾಗುದ್ದಾರೆ. ಸರಿಯಾದ ಕೂಲಿ ನಿರ್ಧರಿಸಿ  ಕಾನೂನು ಹೊರಡಿಸಿ ನ್ಯಾಯ ಒದಗಿಸುವಲ್ಲಿ ನಮ್ಮ ಸರ್ಕಾರಗಳೂ ವಿಫಲವಾಗಿರುವುದು ವಿಪರ್ಯಾಸ.

ಹಲವಾರು ಕ್ಷೇತ್ರಗಳಲ್ಲಿ ವಿಚಾರವಂತರು, ವಿಜ್ಞಾನಿಗಳು ಹೊಸತನದ ಅನ್ವೇಷಣೆಗಳನ್ನೇನೋ ಮಾಡುತ್ತಿದ್ದಾರೆ ಆದರೆ ಸಾಮಾನ್ಯರಿಗೆ ತಲುಪಿಸುವ ಮಾರ್ಗಗಳನ್ನು ಹುಡುಕುವುದರಲ್ಲಿ ಎಡವುತಿದ್ದಾರೆ. ಸಂಸತ್ತಿನಲ್ಲಿ, ವಿಧಾನಸಭೆಯಲ್ಲಿ ಯಾವಾಗಲೂ ಬಡವರಿಗೆ ಸರ್ಕಾರದ ಸೌಲಭ್ಯ ಸಿಗುತ್ತಿಲ್ಲ ಎಂದು ಹೇಳುವುದೇ ಆಯಿತು ಈ ಜಂಬಕೋರರ(ಜನಪ್ರತಿನಿಧಿಗಳ) ಮಾತುಗಳು, ಅವರಿಗೆ ನಿಜವಾಗಲೂ ಯಾವುದೇ ರೀತಿಯ ಕಾಳಜಿಯಂತೂ ಇಲ್ಲ. ಜನರ ಪರವಾಗಿದ್ದೇವೆಂದು ವೋಟು ಗಿಟ್ಟಿಸಿಕೊಳ್ಳುವ ತೆವಲು ಬಿಟ್ಟರೆ ಮತ್ತೇನೂ ಇಲ್ಲ. ಇದು ಕೇವಲ ಒಂದು ರೈಲಿನ ಸಮಸ್ಯೆಯಲ್ಲ, ಇಡೀ ಸಾಮಾಜಿಕ ಪಿಡುಗುಗಳ ಒಂದು ಭಾಗ ಅಷ್ಟೇ.ಒಂದು ರಾಜ್ಯ ಅಸ್ತಿತ್ವದ ಕಗ್ಗೊಲೆಯೊಂದೆ ಅಲ್ಲ ಇಡೀ ದೇಶವನ್ನೇ ಆವರಿಸಿರುವ ಶೋಚನೀಯ ಪರಿಸ್ಥಿತಿಗಳು. ಇಷ್ಟೆಲ್ಲಾ ಸಮಸ್ಯೆಗಳು ಇದ್ದೂ ಕೂಡ ಭಾರತ ಬೆಳೆಯುತ್ತಿರುವ ದೇಶ ಎಂದರೆ ನಾಚಿಕೆಯಾಗುತ್ತಿದೆ. ಅದಕ್ಕೆ ನಾನು ಹೇಳಿದ್ದು ಹಲವಾರು ಆಂತರಿಕ ಸಮಸ್ಯೆಗಳಿದ್ದು, ಕೂಲಿ ಕಾರ್ಮಿಕರ, ರೈತರ ಜೀವನ ಸುಸ್ಥಿರ ಸ್ಥಾನ ತಲುಪುವವರೆಗೆ ಇದನ್ನು ಬೆಳೆಯುತ್ತಿರುವ ರಾಷ್ಟ್ರ ಅಂತ ಹೇಳಲಾಗದು, "ಭಾರತ ಬೆಳೆಯುತ್ತಿಲ್ಲ, ಬಳಲುತ್ತಿದೆ". ಬ್ರಿಟಿಷರು ಬಿಟ್ಟು ಹೋಗಿರುವ ಒಡೆದು ಆಳುವ ನೀತಿಯನ್ನ ನಮ್ಮ ರಾಜಕಾರಣಿಗಳು ಪಾಲಿಸುತ್ತಿದ್ದಾರೆ. ಪ್ರತಿಯೊಬ್ಬ ಭಾರತೀಯನೂ ವಿಚಾರವಂತನಾಗಬೇಕು. ಧರ್ಮದ ವಿಷಬೀಜಗಳ ಬಿತ್ತುವುದು ತಡೆಗಟ್ಟಬೇಕು.ನಾವೆಲ್ಲರೂ ಧರ್ಮೀಯತೆ, ಮಾತಾಂಧತೆ, ಪಕ್ಷಾತೀತವಾಗಿ ಹೋರಾಡಿದಾಗ ಮಾತ್ರ ಸಮಾಜದ ಏಳ್ಗೆ, ಸರ್ವ, ಸಮೃದ್ಧ ಭಾರತದ ಕನಸು ನನಸಾಗಿಸುವುದು ನಮ್ಮ ಕೈಯಲ್ಲಿದೆ.

ನನ್ನ ಪ್ರಕಾರ ಸಮಾಜದ ವ್ಯವಸ್ಥೆಯೊಂದರಲ್ಲೇ ಬದಲಾವಣೆ ಬಯಸಿದರೆ ಅದು ಮೂರ್ಖತನ ಎನ್ನಬಹುದು, ಏಕೆಂದರೆ ಪ್ರತಿಯೊಬ್ಬರ ಆಲೋಚನೆಗಳಲ್ಲಿ ಬದಲಾವಣೆ ಕಾಣದೆ ಸುಸ್ಥಿರ ಸಮಾಜವನ್ನು ನಿರೀಕ್ಷಿಸಲಾಗದು. ಸರ್ಕಾರದ ಕಾರ್ಯಗಳು ಜನರ ತಲುಪುವ ಬಗ್ಗೆ ನನ್ನ ಅನಿಸಿಕೆ ಏನೆಂದರೆ ವ್ಯವಸ್ಥಿತವಾಗಿ ಯೋಜನೆಗಳ ರೂಪಿಸುವ ಜೊತೆಗೆ ಪಾರದರ್ಶಕವಾಗಿ ಕೆಲಸ ಮಾಡುವ ಹಾಗೆ ಈಗಿನ ತಂತ್ರಜ್ಞಾನ ಬಳಸಿ ಎಲ್ಲಾ ಚಟುವಟಿಕೆಗಳ ಮಾಹಿತಿಯನ್ನ ಜನರಿಗೆ ತಿಳಿಯ ಪಡಿಸುವುದು. ಹಾಗೇ ಅವರಿಗೆ ತಲುಪಿರುವ ಬಗ್ಗೆ ಡಿಜಿಟಲ್ ಸರ್ವೇ ಮಾಡುವ ವ್ಯವಸ್ಥೆಯನ್ನ ಜಾರಿಗೆ ತರಬೇಕು. ಆಗಾದಾಗ ಮಾತ್ರ ಭವ್ಯ ಭಾರತದ ಕನಸು ನನಸಾಗುವುದು, ಆಗ ಭಾರತ ಬೆಳೆಯುತ್ತಿರುವ ರಾಷ್ಟ್ರಗಳ ಗುಂಪಿಂದ ಉತ್ತುಂಗ ಸ್ಥಾನಕ್ಕೇರಬಲ್ಲದು.ಮಾತುಗಳು ಪದಗಳಾಗಿ ಉಳಿಯಬಾರದು ಕಾರ್ಯಗಳಾಗಬೇಕು. ಆ ಉತ್ತಮ ಕೆಲಸ ನಮ್ಮ ಯುವ ಜನರಿಂದಲೇ ಶುರುವಾಗಲಿ.


ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

**– ಜಿ.ಬಸವರಾಜ್**


**ಸ್ನಾತಕೋತ್ತರ ವಿದ್ಯಾರ್ಥಿ**

# ಚಿತ್ರಕಲೆ

## ವಿಶ್ವ ಮಾನವ (ಕುವೆಂಪು)




## ನಾಕುತಂತಿಯ ಸರದಾರ (ದ.ರಾ ಬೇಂದ್ರೆ)




-ಚೆನ್ನವೀರೇಶ ಜೆ. ವಿ **UG19AGR3256 , Batch -2019-2023**

## ಕರುನಾಡ ವೈಭವ



## ಕರ್ನಾಟಕ ರತ್ನ ಅಜರಾಮರ ಪುನೀತ




–ರೋಷಿಣಿಪ್ರಿಯ. ಸಿ. ಎಚ್, **UG20AGR3625, Batch -2020-2024**

## ಗಾನ ಗಂಧರ್ವ




## ನಾಟ್ಯ ಮಯೂರಿ



ರಕ್ಷಿತ್.ಬೇವಿನಮರದ , ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿ

## ಯಕ್ಷಗಾನ



ದಿವ್ಯ .ಕೆ.ಟಿ.

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿನಿ

## ಶಬ್ಧಗಾರುಡಿಗ




ರಕ್ಷಿತ್.ಬೇವಿನಮರದ ,

ದ್ವಿತೀಯ ವರ್ಷದ ಕೃಷಿ ವಿದ್ಯಾರ್ಥಿ

## ನಮ್ಮ ನಾಡಿನ ಹೆಮ್ಮೆಯ ಕೋಲ



**ಎ. ಕೆ. ಯಶಸ್ವಿನಿ**

**ತೃತೀಯ ವರ್ಷದ ಕೃಷಿ ವಿದ್ಯಾರ್ಥಿನಿ**

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

# ಕನ್ನಡ ರಥ ಯಾತ್ರೆ







# ಗಮಕ ಕಾರ್ಯಕ್ರಮ





# ಕನ್ನಡ ಪರ್ವದ ಸವಿ ನೆನಪು





# ಕೃಷಿ ಮಹಾವಿದ್ಯಾಲಯ, ರಾಯಚೂರು



ಹೆಸರಾಯಿತು ಕರ್ನಾಟಕ

ಉಸಿರಾಗಲಿ ಕನ್ನಡ

ಸಿರಿಗನ್ನಡಂ ಗೆಲ್ಗೆ

ಸಿರಿಗನ್ನಡಂ ಬಾಳ್ಗೆ